ESTD: 1919 ಸ್ಥಾಪನೆ

Registered No. M. 4468

ಚಂದಾ ದರ
ಸ್ಥಳೀಯರಿಗೆ
4—8—0
ಪರಸ್ಥಳೀಯರಿಗೆ
6—2—0
ಬಿಡಿ ಸಂಚಿಕೆಃ
ಮಂಗಳವಾರ 0—1—6
ಶುಕ್ರವಾರ 0—0—6
ಕಾರ್ಯಾಲಯ
ರಥಬೀದಿ, ಮಂಗಳೂರು

ಕಂಠೀರವ

KANNADA KANTEERAVA BI-WEEKLY

ಸಂಪುಟ ೨೮] ಮಂಗಳೂರು, ೧೯೪೬ನೇ ಇಸವಿ ಮೇ ತಾ. ೨೧ನೇ ಮಂಗಳವಾರ [ಸಂಚಿಕೆ ೧೫
VOL·XXVIII] MANGALORE, TUESDAY 21 MAY, 1946 [NO. 15

Work Executed by Skilled Artists
Oil Paintings
Commercial Drawings
Cinema Slides
Etc. Etc.
Shevgoor Fine Arts
CAR ST. MANGALORE.

ಗಾಂಧಿಜಿಯವರ ಭವಿಷ್ಯವೆಂದಿಗೂ ಸುಳ್ಳಾಗದು.

ಭಾರತಕ್ಕೆ ಏನಾದರೊಂದಿಷ್ಟು ಸಿಕ್ಕೇ ಸಿಕ್ಕುವುದು.

ಸಿವ್ಲದಲ್ಲಿ ತಾ. ೧೫ರಂದು ಮಹಾ
ರು ತಮ್ಮ ಪ್ರಾರ್ಥನಾ ಕಾಲದಲ್ಲಿ
ಟಿಶ್ ನಿಯೋಗ ಗೋಷ್ಠಿಯವರು ಈ
ಾರಿ ಏನೂ ಮಾಡದೆ ಹಿಂದಿರುಗುವುದಿಲ್ಲ
ಂದೂ ಹಿಂದುಸ್ಥಾನದ ಮುಂದಾಳುಗ
ಾದರೂ ಬರೆಗ್ಯೆಯಲ್ಲಿ ಬರುವುದಿಲ್ಲವೆಂ
ೂ ಸ್ಪಷ್ಟವಾಗಿ ಆಡಿ, ನಿಯೋಗಗೋಷ್ಠಿ
ುವರು ಹಿಂದುಸ್ಥಾನಕ್ಕೆ ಒಂದಿಷ್ಟು ಅಧಿ
ಾರವನ್ನು ಕೊಡಲು ಬಂದಿರುವರೆಂದೇ
ೂಚಿಸಿದರು. ವಸ್ತುತಃ ಮಹಾತ್ಮರು
ಮಾತುಗಳನ್ನು ಸರಿಯೊದ ಆಧಾರಗ
ಲ್ಲದೆ, ಕೇವಲ ಊಹನೆಯಿಂದಾಡಿರುವು
ಲ್ಲ. ಅವರು ಆ ನಿಯೋಗ ಗೋಷ್ಠಿಯ
ರೊಡನೆ ಸರ್ವದಾ ಸಂಪರ್ಕವಿರಿಸಿಕೊಂ
ು, ಆಗಾಗ ಅಗತ್ಯವಿರುವ ಹಿತಸೂಚನೆಗ
ನ್ನು ಆ ನಿಯೋಗ ಗೋಷ್ಠಿಯವರಿಗೆ ಕೊ
ುವರು. ಆದುದರಿಂದ ಮಹಾತ್ಮರ ಭವಿ
ುವಾಣಿ ಸುಳ್ಳಾಗದೆಂದು ತಿಳಿಯುವಲ್ಲಿ
ುದೇಹವೇನೂ ತೋರದು.

ಕಳೆದ ಗುರುವಾರದ ತಾ. ೧೬ರಲ್ಲಿಯ
ಲ್ಲಿ "ಬ್ರಾಡ್‌ಕಾಸ್ಟಿ"ನ ಸಾರಾಂಶವಾದ
ಂ ಮಹಾತ್ಮರ ಎಶ್ವಾಸವು ಅಕಾರಣವಾ
ುದಲ್ಲವೆಂದೇ ಸಿದ್ಧಾಂತಪಡಿಸುತ್ತವೆ; ಆ
ಪಡಿಗಟ್ಟುಗಳ ಮೇರೆಗೆ—ಒಂದು ರಾಜ್ಯ
ಟನಾ ರಚನೆಯ ಮಂಡಲಿಯು ಅದಕ್ಕೆ
ಾಯಕವಾಗಿ ಕೆಲವು ಪ್ರಾಂತಿಕ ಮಂ
ಲಿಗಳೂ ಕೂಡಲೇ ನಿರ್ಮಾಣವಾಗು
ವು; ಮತಗೊಂಡ ಹಿಂದೂ ಮುಸ್ಲಿಂ
ತ್ರಗಳು ಏರ್ಪಡಲಿರುವವು; ಭಾರತಕ್ಕೆ
ಒಂದೇ ಒಂದು ಯೂನಿಯನ್ ಸ್ಥಾಪಿತ
ಾಗುವುದು—ಹೀಗೆಂದು ನಾವು ತಿಳಿಯ
ಹುದಾಗಿದೆ. ಎಂ. ಜಿನ್ನರ ವಾದದಂತೆ
ವರ ರೀತಿಯ ಪಾಕಿಸ್ತಾನವೇನೂ ಏರ್ಪ
ುವ ಸಂಭವ ತೋರದು; ಅಥವಾ ಅವರ
ಭಿಪ್ರಾಯದಂತೆ ಎರಡು ಯೂನಿಯನು
ಳನ್ನು ಸ್ಥಾಪಿಸುವ ಆಲೋಚನೆಯೂ ಸಾ
ರ್ಥಕಗೊಳ್ಳುವಂತಿಲ್ಲ; ಮುಖ್ಯ, ನಿಯೋಗ
ೋಷ್ಠಿಯವರು ಎಂ. ಜಿನ್ನರ ಮುಖ್ಯ
ೂಡನೆಗಳನ್ನೆಲ್ಲ ಎತ್ತಲೋ ಸರಿಸಿರುವುದ
ಂದ, ಎಂ. ಜಿನ್ನರು ಮುಂದೆ ಯಾವ
ಾರ್ಯಕ್ರಮಗಳನ್ನು ಅನುಸರಿಸುವರೋ
ೂಡಬೇಕಾಗಿದೆ.

ಈ ಕುರಿತಾದ ಎವರಗಳು ಮುಂದೆ
ಸ್ತಾರವಾಗಿ ಪ್ರಕಟವಾಗುವುದರ ಜತೆಗೆ,
ನಿಯೋಗ ಗೋಷ್ಠಿಯವರ ಯೋಜನೆಗೆ
ಅನುಸಾರವಾದ ಕಾರ್ಯಕ್ರಮಗಳೂ ಬೇ
ಗನೇ ಜಾರಿಗೆ ಬರಲಿವೆ. ಮಹಾತ್ಮರು
ಸೂಚಿಸಿದಂತೆ ಮುಂದಿನ ಒಂದು ವಾರ
ಭಾರತದ ಇತಿಹಾಸದಲ್ಲಿ ನಿರ್ಣಾಯಕ
ದಿನಗಳೇ ಆಗಿರುವುವು. ಅದರ ಪರಿಣಾಮ
ವಾಗಿ ಭಾರತದ ಸ್ವಾತಂತ್ರ್ಯದ ಹಾದಿ ಪರಿ
ಷ್ಕಾರಗೊಳ್ಳುವುದೆಂಬುದು ಸ್ವಯಂಸಿದ್ಧ.

——

ಪಾಲೆಸ್ತೈನಿನ ಸಮಸ್ಯೆ—

ಎಂ. ಜಿನ್ನಾ ಸಾಹೇಬರ ವೇದಾಂತ

ಎರಡು ಇಲಿಗಳು ತಮ್ಮೊಳಗೆ ಗಿಣ್ಣನ್ನು ಪಾಲು ಹಂಚಿಕೊಡಬೇಕೆಂದು ಒಂದು ಬೆಕ್ಕನ್ನು ಕೇಳಿಕೊಂಡದ್ದೊಂದು ಹಳೆಯ ಕಥೆ. ಆ ಕಥೆಯನ್ನು ಬಲ್ಲವರು —ಪಾಲೆಸ್ತೈನಿನ ವಿಚಾರದಲ್ಲಿ ಆ ಆಂಗ್ಲೋ ಅಮೇರಿಕನ್ ಸಮಿತಿಯವರು ಬರೆದಿರುವ ಆ ವರದಿಯನ್ನು ಕಂಡು ಎಂ. ಜಿನ್ನರು ಕೋಪಿಸಿಕೊಳ್ಳಲು ಯಾವ ಕಾರಣವೂ ಇಲ್ಲವೆನ್ನುವರಾದರೂ, ಎಂ. ಜಿನ್ನರಿಗೇನೋ ಆ ವಿಷಯದಲ್ಲಿ ಸಿಟ್ಟು ಬಂದಿದೆ ಎಂಬುದು ನಿಜವಾದ ಮಾತೇ ಆಗಿದೆ. ಎಲ್ಲರಿಗೂ ಇದು ವರೆಗೆ ತಿಳಿದ ಹಾಗೆ, ಪಾಲೆಸ್ತೈನಿನಲ್ಲಿ ಇದ್ದ ಜನಾಂಗಗಳು ಎರಡು; ಅರಬರು ಮತ್ತು ಯೆಹೂದಿಯರು. ಆದರೆ ಆ ಆಂಗ್ಲೋ ಅಮೇರಿಕನ್ ಕಮಿಟಿಯವರು ಈಗ ಪಾಲೆಸ್ತೈನಿನಲ್ಲಿ ಮೂರನೆಯ ಜನಾಂಗವಾದ ಕ್ರೈಸ್ತರಿದ್ದಾರೆಂದೂಕಂಡು ಹಿಡಿದಿದ್ದಾರೆ. ಅಷ್ಟೇ ಅಲ್ಲ; ಅವೆಂಡು ಜನಾಂಗಗಳು ತಮ್ಮೊಳಗೊಂದು ತೀರ್ಮಾನಕ್ಕೆ ಒರುವ ವರೆಗೂ, ಆ ಮೂರನೆಯ ಜನಾಂಗವೇ ಅಲ್ಲಿ ಆಳುತ್ತ ಬರಬೇಕೆಂದೂ ಆ ಸಮಿತಿ ತೀರ್ಮಾನಿಸಿರುವಂತೆಯೂ ತಿಳಿದು ಬಂದಿದೆ. ಇದರಿಂದ ಎಂ. ಜಿನ್ನರು ತಮಗೆ ಕೋಪ ಬಂದಿರುವಂತೆ ತೋರಿಸಿಕೊಳ್ಳಬೇಕಾದುದೇಕೆ? ಎಂ. ಜಿನ್ನಾ ಸಾಹೇಬರು ಇಂಡಿಯದಲ್ಲಿ,—ಸರಿಯಾದ ಕಾರಣಗಳು ಇಲ್ಲದಿದ್ದರೂ ಕೂಡ—ಅದೇ ರೀತಿಯ ಗತಿಗಳನ್ನೇ ಸೃಷ್ಟಿಸಲಿಲ್ಲವೆ? ಯೆಹೂದಿಗಳೆಂದರೆ ಅರಬರಿಂದ ಬೇರೆಯಾದ ಒಂದು ಜನಾಂಗ. ಭಾರತದ ಮುಸ್ಲಿಮರಲ್ಲಿ ಬಹು ಸಂಖ್ಯಾಕರು, ಹಿಂದೂ ಧರ್ಮದಿಂದ ಮುಸ್ಲಿಂ ಧರ್ಮಕ್ಕೆ ಸೇರಿ ಬಂದವರ ವಂಶೀಯರು. ಇಷ್ಟಾದರೂ ಎಂ. ಜಿನ್ನಾ ಸಾಹೇಬರು ಹಿಂದುಸ್ಥಾನದ ಮುಸ್ಲಿಮರಿಗಾಗಿ ಒಂದು ಪ್ರತ್ಯೇಕ ಮನೆ ಭೂಮಿಯನ್ನೇ ಕೇಳುತ್ತಿದ್ದಾರೆ; ಆ ಹಕ್ಕು ಸ್ಥಾಪಿಸುತ್ತಿದ್ದಾರೆ ಹಾಗಾದರೆ ಹಿಂದು ಸ್ಥಾನಕ್ಕೆಂತ ಎಷ್ಟೋ ಸಣ್ಣದಾದ ಪ್ಯಾಲಸ್ತೈನನ್ನು, ತಮ್ಮ ಮನೆ—ಭೂಮಿ ಎಂದೇ ಹಕ್ಕು ಸ್ಥಾಪಿಸಲು ಯೆಹೂದಿಗಳಿಗೆ ಏತಕ್ಕೆ ಹಕ್ಕಿಲ್ಲ? ಪೆಲೆಸ್ತೈನಿನಲ್ಲಿ ಮೊದಲು ಬಂದು ನೆಲಸಿದವರಾರು?—ಅರಬರೋ, ಯೆಹೂದಿಗಳೋ? ಇತಿಹಾಸದ ಪ್ರಕಾರ ನೋಡಿದರೆ, ಅಲ್ಲಿ ಮೊದಲು ಬಂದು ನೆಲಸಿದವರು ಯೆಹೂದಿಗಳೇ. ಆದರೂ ಅರಬರು ಪ್ಯಾಲಸ್ತೈನ್ ತಮ್ಮ ಮನೆ ಭೂಮಿ ಎಂದೇ ಹಕ್ಕು ಸ್ಥಾಪಿಸುತ್ತಿರುವರು.

ಹಿಂದುಗಳು ಈ ದೇಶಕ್ಕೆ ಬಂದು ನೆಲೆಸಿದ ಎಷ್ಟೋ ಶತಮಾನಗಳ ಮೇಲೆಯೇ, ಮುಸಲ್ಮಾನರು ಈ ಭಾರತ ಭೂಮಿಗೆ ಬಂದರೆಂಬುದು ಇತಿಹಾಸ ಪ್ರಸಿದ್ಧವಾದ ನಿರ್ವಾದ ಸಂಗತಿ. ಆದುದರಿಂದ ಹಿಂದುಗಳಿಗೆ ಈ ದೇಶವು ಅವರ ಮನೆ—ಭೂಮಿ ಎಂದು ಹಕ್ಕು ಸ್ಥಾಪಿಸಲು ಪ್ರತ್ಯೇಕವಾದ ಹಕ್ಕೇ ಇಹ. ಆದರೆ ಎಂ. ಜಿನ್ನರು ಆ ಹಕ್ಕನ್ನು ಸರ್ವ ಪ್ರಕಾರದಲ್ಲಿಯೂ ಅಲ್ಲಗಳೆಯುತ್ತಿರುವರು. ಮುಸಲ್ಮಾನರು ಈ ದೇಶಕ್ಕೆ ಕಾಲಿಟ್ಟ ಆ ಸಮಯವನ್ನು ಅನುಲಕ್ಷಿಸಿ, ಅದರ ಆಧಾರದ ಮೇಲೆ, ಈ ದೇಶವು ಮುಸ್ಲಿಮರ ಮನೆ ಭೂಮಿ ಎಂದು ಎಂ. ಜಿನ್ನರು ಸಾಧಿಸಲು ಮುಂದಾಗುವುದಿಲ್ಲ. ಅವರ ಒಟ್ಟು ವಾದವಿಷ್ಟು:—ಹಿಂದೂ ಧರ್ಮದಿಂದ ಮುಸಲ್ಮಾನ ಧರ್ಮಕ್ಕೆ ಬಂದಿರುವ ಹಿಂದುಗಳು ಕೆಲವು ಪ್ರಾಂತಗಳಲ್ಲಿ ಕಾಲಕ್ರಮದಲ್ಲಿ ಬಹು ಸಂಖ್ಯಾಕರಾಗಿ ಬೆಳೆದಿರುವುದರಿಂದ ಅವರು ಆ ಪ್ರಾಂತಗಳನ್ನು ತಮ್ಮ ಮನೆ ಭೂಮಿಯೆಂದು ಹಕ್ಕು ಸ್ಥಾಪಿಸಲು ಅವರಿಗೆ ಹಕ್ಕು ಇದ್ದೇ ಇದೆ. ಹಿಂದೆ ಹೇಳಿದಂತೆ, ಯೆಹೂದಿಗಳು ಪ್ಯಾಲಸ್ತೈನನ್ನು ತಮ್ಮದಾದ ಮನೆ ಭೂಮಿ ಎಂದು ಹಕ್ಕು ಸ್ಥಾಪಿಸಲು ಇಲ್ಲಿನ ಮುಸ್ಲಿಮರಿಗಿಂತಲೂ ಅವರಿಗೆ ಅಧಿಕವಾದ ಹಕ್ಕೇ ಇದೆಯಾದರೂ ಎಂ. ಜಿನ್ನರಿಗೆ ಹಿಂದೂಸ್ಥಾನದ ಮಟ್ಟಿಗಾದರೆ ಒಂದು ರೀತಿಯ ವಾದ ಸರಣಿಯೂ ಪ್ಯಾಲಸ್ತೈನಿನ ಕುರಿತಾದರೆ ಇನ್ನೊಂದು ರೀತಿಯ ವಾದ ಸರಣಿಯೂ ಇದೆ ಎಂಬುದು ಸ್ಪಷ್ಟ. ಯೆಹೂದಿಗಳಿಗೆ ಅಲ್ಲಿ ಯಾವ ರೀತಿಯ ಹಕ್ಕಾದರೂ ಉಂಟೆಂಬುದನ್ನು ಎಂ. ಜಿನ್ನರು ಒಪ್ಪದೆ, ಯೆಹೂದಿಗಳು ಕರೆಯದೆ ಅಲ್ಲಿಗೆ ಒಳ ನುಗ್ಗಿದವರೆಂದೂ, ಅದ್ದರಿಂದ ಅವರನ್ನು ಹೊರ ನೂಕಬೇಕು ಅಥವಾ ಒತ್ತಿ ಬಿಡಬೇಕೆಂದೂ ಹೇಳುತ್ತಿದ್ದಾರೆ. ಅರಬರು ಮುಸ್ಲಿಮರು; ಎಂ. ಜಿನ್ನರೂ ಮುಸ್ಲಿಮರು. ಆದ್ದರಿಂದ ನ್ಯಾಯ ನೀತಿಯು ಹೊಗಿದ್ದರೂ, ಅರಬರ ಕಡೆಗೇ ಇರಬೇಕೆಂದು ಎಂ. ಜಿನ್ನರ ಹೇಳಿಕೆ. ಈ ಸಂದರ್ಭದಲ್ಲಿ ಆಂಗ್ಲೋ-ಅಮೇರಿಕ ಕಮಿಟಿಯ ವರದಿಯನ್ನು ಎಂದಿಗೂ ಹಿಂದುಸ್ಥಾನದ ಮುಸ್ಲಿಮರೊಪ್ಪರೆಂದು ಎಂ. ಜಿನ್ನರು ಗುಡುಗಾಡುತ್ತಿರುವರು. ಆದರೆ ಬ್ರಿಟಿಷ್ ಮತ್ತು ಅಮೇರಿಕದ ಆ ಸಂಯುಕ್ತ ಸಮಿತಿಯ ವರದಿಯವಾಗಿ, ಎಂಥ ಕಾರ್ಯಕ್ರಮಗಳನ್ನು ಕೈಕೊಂಡು ಅವರಿಗೆ ಬುದ್ಧಿ ಕಲಿಸಬೇಕೆಂಬ ಈ ಕರ್ತವ್ಯಭಾರವು ಎಂ. ಜಿನ್ನರಿಗೂ ಮುಸ್ಲಿಂ ಲೀಗಿಗೂ ಸೇರಿದುದಾಗಿದೆ. ಹೇಗೂ ಲೀಗಿನ ಮುಖಂಡರ ಈ ಗುಡುಗಾಟವು ವಾಡಿಕೆಯಾಗಿದೆ; ನಿತ್ಯಗಟ್ಟಲೆಯದಾಗಿದೆ. ಅದು ಇಲ್ಲಿನ ಕೆಲವರನ್ನು ಭೀತಿಪಡಿಸಬಹುದಾದರೂ, ಭಾರತದ ಹೊರಗಡೆಯಲ್ಲಿ ಅದನ್ನು ಕೇಳಿ ನಗುವರಲ್ಲದೆ ಬೇರೆ ಯಾವ ಪುರಸ್ಕಾರವೂ ದೊರಕದು.

——

ತಿರುಗಿ ಜೀವ ಬಂತು

೪೧-೪೨ರ ಗಲಭೆಯ ಸಂಬಂಧ ಈ ಅಧಿಪತ್ಯದಲ್ಲಿ ರದ್ದಾಗಿದ್ದ ಕೆಲವು ಸರಕಾರಿ ಮತ್ತು ಲೋಕಲ್ ಬೋರ್ಡ್ ಉಪಾಧ್ಯಾಯರುಗಳ ಸರ್ಟಿಫಿಕೇಟುಗಳನ್ನು ತಿರುಗಿ ಊರ್ಜಿತಗೊಳಿಸಿ ಅಂಥ ಉಪಾಧ್ಯಾಯರು ಪುನಃ ತಮ್ಮ ಹಿಂದಿನ ಕೆಲಸಕ್ಕೆ ಸೇರಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿದು ಬಂದಿದೆ.

——

ಶ್ರೀ ಜಯಪ್ರಕಾಶ ನಾರಾಯಣರು.

ಶ್ರೀ। ಜಯಪ್ರಕಾಶ ನಾರಾಯಣರು ೪೦ ವರ್ಷದ ಒಬ್ಬ ಸುಂದರ ಯುವಕರು. ಸಾಮಾನ್ಯವಾಗಿ ಉಚ್ಚ ವಿದ್ಯಾಭ್ಯಾಸಕ್ಕೆ ಹಿಂದೀಯನು ಇಂಗ್ಲೆಂಡನ್ನೇ ಆರಿಸುತ್ತಿರುವನಾದರೂ ಇಂಗ್ಲೆಂಡನ್ನು ಕಡೆಗಣಿಸಿ, ಅಮೇರಿಕಕ್ಕೆ ಹೋಗಿ ಅಲ್ಲಿ ವಿದ್ಯಾಭ್ಯಾಸವನ್ನು ಮಾಡುವಂಥ ಹಿಂದೀಯನೊಬ್ಬ ಅಪರೂಪವೆನ್ನಬೇಕು. ಶ್ರೀ। ಜಯ ಪ್ರಕಾಶರು ಅಂಥ ಅಪರ್ಟೂಪ ವ್ಯಕ್ತಿಗಳಲ್ಲಿ ಒಬ್ಬರು. ಅವರು ತಮ್ಮ ನಿರ್ದಿಷ್ಟ ಧ್ಯೇಯ—ಆಶೆ ಆಕಾಂಕ್ಷೆಗಳ ಸಾಧನೆಯ ಬಲದಿಂದ ಅಮೇರಿಕಕ್ಕೆ ಹೋಗಿ, ತನ್ನ ವ್ಯಾಸಂಗಕ್ಕೆ ಆರಂಭಿಸಿದರು. ಹಾಗೆ ಶ್ರೀ। ಜಯಪ್ರಕಾಶರು, ತನ್ನ ಅಮೇರಿಕದ ವಿದ್ಯಾಭ್ಯಾಸ ಫಲದಿಂದ ಒಂದು ವೈಶಿಷ್ಟ್ಯವನ್ನೇ ಪಡೆದು ಕೊಂಡರು. ಭಾರತದ ರಾಜಕಾರಣ ಸಮಸ್ಯೆಗೆ, ಅಮೇರಿಕನರ ವಿಲಕ್ಷಣ ಪರವಾದ ಎರಡು ಗುಣಗಳನ್ನು ಅವರು ಬಳಸಿಕೊಂಡರು. ಒಂದು ವಿಷಯದ ಮೇಲೆ, ಸರ್ವಾನುಮತವಿದ್ದಾಗ ಇಲ್ಲವೆ ಒಂದು ವಿಷಯಪುಷ್ಟಿಯನ್ನು ಮಾಡುತ್ತ, ಅದರ ಮೇಲೆ ಮಹತ್ವವನ್ನು ಬೀರುವಾಗ—ಅದನ್ನು ಪ್ರತಿಭಟಿಸುವಂತಹ ಅಮೇರಿಕನರ ತೀಕ್ಷ್ಣಕಾರಿಯಾದ ಸುದೃಢ ಗತಿಯನ್ನು ಅವರು ರಕ್ತಗತ ಮಾಡಿಕೊಂಡಿರುತ್ತಾರೆ. ಅಲ್ಲದೆ ವಿಷಯದ ಪರಿಶೋಧನೆಯಲ್ಲಿ ಅವರು ಅಮೇರಿಕನರ ಚಾಳಿಯನ್ನೂ ಬಳಸುತ್ತಿದ್ದಾರೆ. ಆ ಚಾಳಿಯು ಸ್ಥೈರ್ಯ ಗುಣಗಳಿಂದ ಕೂಡಿದೆ. ಒಂದು ಕಾರ್ಯಸಾಧನೆಯಂತಹ ಮಹತ್ವದ ಪ್ರಯತ್ನವನ್ನು ಮುಂದರಿಸಲು ಅದಕ್ಕೆ ಶಕ್ತಿಯಿದೆ. ಪಂಡಿತ ನೆಹರು ಅವರ ಪ್ರೇರಣೆ, ಪ್ರೋತ್ಸಾಹದಿಂದ, ಶ್ರೀ। ಜಯಪ್ರಕಾಶರು ಸ್ಥಾಪಿಸಿದ ಕಾಂಗ್ರೆಸಿನ ಲೇಬೊರ್ ಪರಿಶೋಧನಾ ಖಾತೆಯು ಅದಕ್ಕೊಂದು ನಿದರ್ಶನ. ಭಾರತದಲ್ಲಿ ಸರ್ವ ಪ್ರಥಮವಾದ ಅವರು "ಕಪಿಮುಷ್ಟಿ ಧೋರಣ"ವೊಂದು, ಅನೇಕ ಮಂದಿ ಉಗ್ರ ಮತ್ತು ಗಂಭೀರ ವಿಚಾರಪರ ಆದರ್ಶವಾದಿಗಳನ್ನು ಅವರ ಕಡೆಗೆ ಸೆಳೆದಿರುತ್ತದೆ. ಗಾಂಧೀ ತತ್ವ ಮತ್ತು ಸಮತಾವಾದ ತತ್ವದ ಪರಿಶೀಲನೆಯು ಕುರಿತಾಗಿ ಅವರು ಒಂದು ಗ್ರಂಥವನ್ನೇ ಬರೆದು, ಅದರಲ್ಲಿ ಗಾಂಧೀ ತತ್ವವನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸಿದ್ದಾರೆ.

ಶ್ರೀ। ಜಯಪ್ರಕಾಶರು ಕಾಂಗ್ರೆಸ್ ಸಮತಾವಾದಿ ಪಕ್ಷದ ಪ್ರಮುಖ ಸ್ಥಾಪಕರಲ್ಲಿ ಒಬ್ಬರಿರುತ್ತಾರೆ; ಹಾಗೂ ಆ ಪಕ್ಷದ ಅಸಾಧ್ಯ ಪ್ರತಿವಾದಕರಿರುತ್ತಾರೆ. ಸದಾ ಶುಚಿಯ ಉಡುಗೆಯನ್ನು ಧರಿಸಿಕೊಂಡು ಅಚ್ಚುಕಟ್ಟಾಗಿ ಇರುತ್ತಾರೆ. ಅವರೊಡನೆ ಒಡನಾಟವು ಉಲ್ಲಾಸಕರ.

ಜನ್ಮ—ವಿದ್ಯಾಭ್ಯಾಸ

೪೨ ವರ್ಷಗಳ ಹಿಂದೆ, ಬಿಹಾರದ ಸರಾಫ್ ಜಿಲ್ಲೆಯ ಸಿತಾಬರ ಹಳ್ಳಿಯಲ್ಲಿ, ಶ್ರೀ। ಜಯಪ್ರಕಾಶ ನಾರಾಯಣರು ಒಂದು ಬಡ ರೈತ ಕುಟುಂಬದಲ್ಲಿ ಹುಟ್ಟಿದರು.

ಶ್ರೀ। ಜಯಪ್ರಕಾಶರು ಬಾಲ್ಯದಿಂದಲೂ ದೇಶ ಸೇವೆಯ ಮನೋವೃತ್ತಿಯುಳ್ಳವರಾಗಿದ್ದರು. ಅದೇ ಅವರು ವಿದ್ಯಾರ್ಥಿವೇತನವನ್ನು ತೊರೆದು ತಾನು [illegible] ಪದವನ ವರೆಗೆ ದುಡಿಯುತ್ತಿದ್ದ ಕಾಲೇಜನ್ನು ಬಿಟ್ಟು ೧೯೨೧ರ ಸತ್ಯಾಗ್ರಹ ಆಂದೋಲನದಲ್ಲಿ ಭಾಗವಹಿಸಿದರು. ಮುಂದೆ ಅವರು ವ್ಯಾಸಂಗಕ್ಕಾಗಿ ಅಮೇರಿಕಕ್ಕೆ ಹೋದರು.

ತನ್ನ ವ್ಯಾಸಂಗದ ವೆಚ್ಚಕ್ಕೆ, ಕ್ಯಾಲಿಫೋರ್ನಿಯದ ಕಿತ್ತಲೆ, ಬಾದಾಮಿ ಮುಂತಾದ ಹಣ್ಣು ಹಂಪಲು ತೋಟದಲ್ಲಿ ಅವಿಶ್ರಾಂತವಾಗಿ ದುಡಿದು, ಒಂದು ತಿಂಗಳಲ್ಲಿ ೪೧ ಡಾಲರಿಗೆ ಮಿಕ್ಕಿ ಧನವನ್ನು ಸಂಪಾದಿಸಿದರು. ಬಾರ್ಕ್ಲೆಗೆ ಹೋಗಿ ಅವರು ಅಲ್ಲಿ ತನ್ನ ವ್ಯಾಸಂಗವನ್ನು ಆರಂಭಿಸಿದರು. ಬಾಡಿಗೆ ಮನೆಯಲ್ಲಿ ವಾಸ; ಆಹಾರದ ಪಾಕ ತನ್ನದೇ—ಸ್ವಯಂ ಪಾಕ. ಹಾಗೆ ಕ್ಯಾಲಿಫೋರ್ನಿಯಾದಲ್ಲಿ ಒಂದು ಟರ್ಮ್ ಮುಗಿಯುವಷ್ಟರಲ್ಲಿ ಅವರ ಕೈಯಲ್ಲಿದ್ದ ಹಣವೆಲ್ಲ ಮುಗಿದು ಹೋಯಿತು. ಆದುದರಿಂದ ವೇತನವು ಕಡಿಮೆ ಇದ್ದ ಐವಾ ವಿಶ್ವವಿದ್ಯಾಲಯವನ್ನು ಅವರು ಅನಂತರ ಸೇರಿದರು. ವಿದ್ಯಾಭ್ಯಾಸ ಹಾಗೂ ಜೀವನ ನಿರ್ವಹಣದ ವೆಚ್ಚಕ್ಕಾಗಿ, ಅಲ್ಲಿಯೂ ಸಹ ತನ್ನ ವ್ಯಾಸಂಗದ ಜೊತೆಗೆ ಹೊರಗೆ ಏನಾದರೂ ಕೆಲಸವನ್ನು ಇವರು ಮಾಡುತ್ತಿದ್ದರು. ಐವಾ ವಿದ್ಯಾಪೀಠದಿಂದ ಅವರು, ಪುನಃ ವಿಸ್ಕಾನ್ಸಿನ್ ವಿಶ್ವವಿದ್ಯಾಲಯಕ್ಕೆ ಸೇರಿದರು. ಇಲ್ಲಿಂದ ಅವರ ಜೀವನದಲ್ಲಿ ಹೊಸ ಮಾರ್ಪಾಟು ಉಂಟಾಯಿತು.

ಜೀವನದ ಕಹಿ—ಸಿಹಿಗಳ ಅನುಭವವನ್ನು ಅವರು ಚೆನ್ನಾಗಿ ಪಡೆದಿದ್ದರು. ಬಡವ—ಶ್ರೀಮಂತರೊಳಗೆ ಭೇದಾಭೇದವೇಕೆ?—ಎಂದು ಅವರು ಸದಾ ವಿಚಾರ ಮಾಡುತ್ತಿದ್ದರು. ಅಮೇರಿಕದಂತಹ ಭಾಗ್ಯಸಂಪನ್ನ ರಾಷ್ಟ್ರದಲ್ಲಿಯೂ ಕೂಡ, ಅದು ತಪ್ಪದಿರುವುದನ್ನು ಗಮನಿಸಿದರು. ಅದೇ ಹೊತ್ತಿಗೆ ಸರಿಯಾಗಿ ವಿಶ್ವ ವಿದ್ಯಾಲಯದ ಒಬ್ಬ ಸಮತಾವಾದಿ ಪ್ರಧ್ಯಾಪಕನು, ಅವರ ಗುರುವಾದ; ಬಂಡವಾಳಗಾರರ ನಡುವೆ ಇದ್ದು ಕೂಲಿಗಾರರ ಸಮಸ್ಯೆಯನ್ನು ಪರಿಹರಿಸುವುದು ಸಾಧ್ಯವಿಲ್ಲವೆನ್ನುತ್ತಿದ್ದ ಆ ಪ್ರಧ್ಯಾಪಕ. ಕಾರ್ಲ್‌ಮಾರ್ಕ್ಸನ ತತ್ವಗಳ ಮೇಲೆ, ಅವರಿಬ್ಬರಿಗೂ ತೀಕ್ಷ್ಣ ತರ್ಕ—ವಿತರ್ಕಗಳು ನಡೆದವು. ಶ್ರೀ। ಜಯಪ್ರಕಾಶರು, ಕ್ರಮೇಣ ಒಬ್ಬ ಉಚ್ಚ ಸಮತಾವಾದಿಯಾದರು. ಅವರು ಅರ್ಥಶಾಸ್ತ್ರವನ್ನು ಚೆನ್ನಾಗಿ ಓದಿ ಮನನ ಮಾಡಿಕೊಂಡರು. ಆಗ ಅವರು ಬರೆದಿದ್ದ ಒಂದು ಉಪನ್ಯಾಸಕ್ಕೆ ವಿಶೇಷ ಮನ್ನಣೆ ದೊರೆಯಿತು.

ಅವರು ೮ ವರ್ಷ ಅಮೇರಿಕದಲ್ಲಿ ಇದ್ದರು; ೫ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿದರು. ಗಣಿತ ಶಾಸ್ತ್ರದಿಂದ ಮೊದಲು ಮಾಡಿ, ಭೌತಿಕ ಶಾಸ್ತ್ರ, ರಸಾಯನ ಶಾಸ್ತ್ರ, ಸಸ್ಯ ಶಾಸ್ತ್ರ, ಮನಃ ಶಾಸ್ತ್ರ, ಅರ್ಥ ಶಾಸ್ತ್ರ ಮತ್ತು ಸಮಾಜ ಶಾಸ್ತ್ರಗಳನ್ನೂ ಕಲಿತರು. ತನ್ನ ವಿದ್ಯಾಭ್ಯಾಸಕ್ಕಾಗಿ ಅವರು ಪೊಟ್ಟಣ ಕಟ್ಟುವ ಹುಡುಗನಿಂದ ಹಿಡಿದು ಕಾರ್ಖಾನೆಯ [illegible] ದವರೆಗೆ ದುಡಿದರು. ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ, ಲಿಂಬೆ ಹುಳಿ ಮತ್ತು ಗಂಧಕ ಬೆರೆಸಿ, ಹಣ್ಣುಗಳನ್ನು ಶುದ್ಧೀಕರಿಸುವ ಒಂದು ನವವಿಧಾನವನ್ನು ಕಂಡು ಹಿಡಿದರು. ಹೊಟೆಲಿನಲ್ಲಿ ಇವರು ವಿವಿಧ ಹುಡುಗನಾಗಿಯೂ ಇದ್ದರು. ತನ್ನ ವಿದ್ಯಾಭ್ಯಾಸವನ್ನು, ಅವರು ಹೀಗೆ ತನ್ನ ಸ್ವದುಡಿತದ ಫಲದಿಂದಲೇ ಮುಗಿಸಿಕೊಂಡರು.

ಭಾರತಕ್ಕೆ ಆಗಮನ

೧೯೨೯ರಲ್ಲಿ ಅವರು ಭಾರತಕ್ಕೆ ಹಿಂತಿರುಗಿದರು. ಆಗ ಅವರೊಬ್ಬ ಉಚ್ಚ ವಿದ್ಯಾವಂತರು, ಪ್ರಪಂಚ ಜ್ಞಾನವುಳ್ಳ, ಕ್ರಾಂತಿಕಾರ ಮನೋವೃತ್ತಿಯವರಾಗಿದ್ದರು. ಜವಾಹರಲಾಲರು, ಆ ಪ್ರತಿಭಾನ್ವಿತ ಉತ್ಸಾಹೀ ಯುವಕರನ್ನು ಕಂಡು ಅವರ ಮೇಲೆ ಕಾಂಗ್ರೆಸಿನ ಅಂಗವಾದ ಕೂಲಿಕಾರ ಸಂಘದ ಜವಾಬ್ದಾರಿಯನ್ನು ಹೊರಿಸಿದರು. ಅಸಹಕಾರ ಚಳವಳಿದ ಕಾಲದಲ್ಲಿ, ಅವರು ಅ. ಭಾ. ಕಾಂಗ್ರೆಸ್ ಕಮಿಟಿಯ ತತ್ಕಾಲಿಕ ಕಾರ್ಯದರ್ಶಿಗಳಾದರು. ಅಸಹಕಾರ ಚಳವಳಿದಲ್ಲಿ ಭಾಗವಹಿಸಿ, ಮಸಾನಿ, ಅಚ್ಯುತ ಪಟವರ್ಧನ ಮೊದಲಾದ ವೀರರೊಡನೆ ಸೆರೆಮನೆಯನ್ನು ಸೇರಿದರು. ಸೆರೆಮನೆಯಲ್ಲಿ ಅವರೆಲ್ಲ ಒಟ್ಟು ಕೂಡಿ ಸಮತಾವಾದ ಪಕ್ಷದ ರೂಪರೇಖೆಯನ್ನು ರಚಿಸಿದರು.

(೯ನೇ ಪುಟ ನೋಡಿ)

ದಿ ಸೌತ್ ಇಂಡಿಯಾ ಕೊ-ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡ್

ಪೋಸ್ಟ್ ಬೊಕ್ಸ್ ನಂ. 182, ಮದ್ರಾಸು

ಧಾರಾಳವಾದ ಕಮಿಶನಿನ ಶರ್ತಗಳ ಮೇಲೆ ಈ ಕೆಳಗಿನ ಜಿಲ್ಲೆಗಳಲ್ಲಿ ನಮ್ಮ ಸೊಸೈಟಿಯ ಪ್ರಾತಿನಿಧ್ಯ ವಹಿಸಲು ಏಜಂಟರು ಬೇಕಾಗಿದ್ದಾರೆ.

ಕೊಯಮುತ್ತೂರು, ಸೇಲಂ, ನೀಲಗಿರಿ, ಮಲಬಾರ್, ಕೊಚ್ಚಿ ಮತ್ತು ದಕ್ಷಿಣ ಕನ್ನಡ,

ಹೆಚ್ಚಿನ ವಿವರಗಳಿಗೆ ಹೆಡ್ ಆಫೀಸಿಗಾಗಲಿ ನಮ್ಮ ಇನ್ಸ್‌ಪೆಕ್ಟರಿಗಾಗಲಿ ಬರೆದುಕೊಳ್ಳಿ.

ಶ್ರೀ. ಎಸ್. ಜಿ. ದೇವರಾಜ ಬಿ. ಎಸ್‌ಸಿ.
C/o ಎಸ್. ಕೆ. ದೇವರಾಜ
ಉಬರಾಯ್ ಲಿಮಿಟೆಡ್, ಕೊಯಮುತ್ತೂರು.

1945 A YEAR OF ALL ROUND PROGRESS

Completed New Business over		Rs.	20,30,000
Premiums, Interest &c.	,,	Rs.	3,05,000
Govt. & Trust Securities	,,	Rs.	4,25,000
Life Assurance Fund	,,	Rs.	6,30,000
Total Assets	,,	Rs.	7,50,000

Very low Expense Ratio

Reviewing the progress of the Company in 1945 Mr. D. Sesha Iyer, M. A., F. I. A., Actuary, writes:

"If the same policy as you have now been following, is continued in future, I am sure the Company would be able to put up a good record at the next valuation."

A decisive Organisation Programme is now on Hand.

APPLICATIONS FOR SALARIED APPOINTMENT OF **Organisers** and for **Chief & Special Agencies** on commission basis are invited.

The Popular Insurance Company, Limited.
MANGALORE.

ಭಾರತ ಸ್ವಾತಂತ್ರ್ಯ - ಬ್ರಿಟಿಷ್ ಸಚಿವರ ತೀರ್ಮಾನ - ಭಾವೀ ಭಾರತದ ರೂಪ - ವಿಶ್ವಶಾಂತಿ - ವಿದೇಶಾಂಗ ಮಂತ್ರಿ ಕೂಟ -

ಹಿಂದುಸ್ಥಾನದ ಚರಿತ್ರೆಯಲ್ಲಿ ಮೇ ೧೬ನೇ ದಿನವು ಎಂದೂ ಮರೆಯಲಾಗದ ಐತಿಹಾಸಿಕ ವೈಶಿಷ್ಟ್ಯದ ದಿನವೆಂದು ಕೆನಡದಲ್ಲಿ ದೇವದಾಸ ಗಾಂಧಿಯವರು ಹೇಳಿರುವರು. ಹಿಂದೀಯರೆಲ್ಲರೂ ದೇವದಾಸರ ಮಾತು ನಿಜವೆಂದು ಒಪ್ಪುವರೆಂಬುದರಲ್ಲಿ ಸಂಶಯವಿಲ್ಲ. ಮಾರ್ಚಿ ೨೩ರಿಂದ, ಬ್ರಿಟಿಷ್ ಸಚಿವರು ಅವಿಶ್ರಾಂತ ಶ್ರಮದಿಂದ—ಭಾರತ ಸಮಸ್ಯೆಯನ್ನು ಬಿಡಿಸತೊಡಗಿ—ಕಾಂಗ್ರೆಸು ಲೀಗುಗಳಲ್ಲಿ ಐಕ್ಯಮತ್ಯವನ್ನುಂಟುಮಾಡಲು ಪ್ರಯತ್ನಿಸಿದರು. ಆ ಪ್ರಯತ್ನಗಳೆಲ್ಲಾ ನಿಷ್ಫಲವೆಂದು ಕಳೆದ ವಾರ ತಿಳಿದ ಬಳಿಕ ಹಿಂದೀಯರಲ್ಲಿ ನಿರಾಶೆಯು ಅಂಕುರಿಸತೊಡಗಿತ್ತು. ಮೇ ೧೬ನೇ ದಿನ ಬ್ರಿಟಿಷ್ ಸಚಿವರ ತೀರ್ಮಾನವನ್ನು ಕೇಳಿದ ಬಳಿಕ ಆ ನಿರಾಶೆಯ ಕಗ್ಗತ್ತಲು ದೂರವಾಗಿ, ಹಿಂದೀಯರಲ್ಲಿ ಪುನಃ ಆಶೆ ಉತ್ಸಾಹಗಳು ಜನಿಸಿರುತ್ತವೆ.

ಹಿಂದುಸ್ಥಾನದ ಐಕ್ಯತೆಯು ಹಿಂದೀ ಉನ್ನತಿಗೂ ವಿಶ್ವ ಶಾಂತಿಗೂ ಅವಶ್ಯವೆಂಬುದನ್ನು ಬ್ರಿಟಿಷ್ ಸಚಿವರು ಒಪ್ಪಿ, ಜಿನ್ನಾ ಸಾಹೇಬರ ಪಾಕಿಸ್ತಾನವು ಸಾಧ್ಯವಿಲ್ಲವೆಂದು ತೀರ್ಮಾನಿಸಿರುವರಾದರೂ, ಮುಸ್ಲಿಮರು ಬಹು ಸಂಖ್ಯಾತರಾಗಿರುವ ಸಿಂಧು, ವಾಯುವ್ಯ ಗಡಿನಾಡು ಪಂಜಾಬುಗಳನ್ನು ಪ್ರತ್ಯೇಕವೊಂದು ಪ್ರದೇಶವಾಗಿಯೂ—ಬಂಗಾಳ ಅಸ್ಸಾಮುಗಳನ್ನು ಇನ್ನೊಂದು ಪ್ರತ್ಯೇಕ ಪ್ರದೇಶವಾಗಿಯೂ ಇರಗೊಳಿಸಿ,—ಹಿಂದೂ ಸಮಾಜವು ಬಲವಾದರೆ ತಮ್ಮ ಸಂಸ್ಕೃತಿ ಮತ ಧರ್ಮಗಳಿಗೆ ಹಾನಿತಟ್ಟಬಹುದೆಂಬ ನಮ್ಮ ಮುಸ್ಲಿಮ ಬಾಂಧವರ ಭೀತಿಗಳು ದೂರವಾಗುವಂತೆ ವ್ಯವಸ್ಥೆ ಮಾಡಿರುವರು. ಮುಸ್ಲಿಮ್, ಸಿಕ್ಖರಿಗಲ್ಲದೆ ಇತರರಿಗೆ ಇನ್ನು ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡ ನಿರಾಕರಿಸಿ,—ಹಿಂದೂ ಸಮಾಜವನ್ನು ಭಿನ್ನಪಡಿಸ ಪ್ರಯತ್ನಿಸುವ ಡಾಕ್ಟರ್ ಅಂಬೇಡಕಾರರ ಯೋಜನೆಯನ್ನು ಸಚಿವರು ಧಿಕ್ಕರಿಸಿರುವರು. ಇನ್ನು ಮುಸ್ಲಿಮ್ ಸಿಕ್ಖರು ತಾವು ಬೆಳೆಸಿಕೊಂಡು ಬಂದ ತಮ್ಮ ಪ್ರತ್ಯೇಕತೆಯ ಭಾವನೆಗಳನ್ನು ಬಿಟ್ಟು ಎಲ್ಲಾ ಹಿಂದೀಯರೂ ಒಂದೇ ಮಾತೆಯ ಮಕ್ಕಳೆಂದು ನಂಬಿ ಸಹೋದರ ಭಾವದಿಂದ ವರ್ತಿಸತೊಡಗ ಸಾಧ್ಯವಿದೆ.

ಬ್ರಿಟಿಷ್ ಸಚಿವರು ಕಾಂಗ್ರೆಸ್ ಧ್ಯೇಯಗಳನ್ನು ಮನ್ನಿಸಿದರೂ—ಮುಸ್ಲಿಮರೂ ಸಿಕ್ಖರೂ ಹಿಂದೀ ಉನ್ನತಿಗೆ ಬೆಂಬಲರಾಗುವಂತೆ ಅವರನ್ನು ತೃಪ್ತಿಗೊಳಿಸಿ,—ನರೇಂದ್ರರು ಮುಂದೆ ತಮ್ಮ ವೈಯಕ್ತಿಕ ವೈಶಿಷ್ಟ್ಯವನ್ನಿಟ್ಟುಕೊಂಡರೂ ಅವರಿಂದ ಹಿಂದೀ ಉನ್ನತಿಗೆ ಬಾಧೆ ತಟ್ಟದಂತೆ ಜಾಗ್ರತೆ ಇಟ್ಟು— ದೂರದರ್ಶಿತ್ವದ ವಿಚಾರಗಳನ್ನೇ ತಳಹದಿಯಾಗಿಟ್ಟುಕೊಂಡು ರಚಿಸಿರುವ ರಾಜ್ಯಾಂಗ ರಚನೆಯ ರೂಪವು ಭಾವಿ ಭಾರತದ ರೂಪವನ್ನು ನಮಗೆ ಸೂಚಿಸುತ್ತಿದೆ.

ಬಂಗಾಳ, ಅಸ್ಸಾಮುಗಳಲ್ಲೀಗ ನೂರರಲ್ಲಿ ೫೦॥ ಮುಸ್ಲಿಮರು ೪೮॥ ಇತರರು ಹೀಗೆ ಇರುತ್ತಾರೆ. ಬಂಗಾಳದಲ್ಲಿಯೂ ಅಸ್ಸಾಮಿನಲ್ಲಿಯೂ ಈಗಿರುವ ಶಾಸನ ಸಭೆಗಳ ಸದಸ್ಯರೇ ಈ ಪರಿಮಾಣದಲ್ಲಿ ತಮ್ಮ ಪ್ರತಿನಿಧಿಗಳನ್ನು ಆರಿಸಿಕಳುಹಿಸಬೇಕು. ಮುಸ್ಲಿಮ್ ಸದಸ್ಯರು ಮುಸ್ಲಿಂ ಪ್ರತಿನಿಧಿಗಳನ್ನೂ ಸಿಕ್ಖ ಸದಸ್ಯರು ಸಿಕ್ಖ ಪ್ರತಿನಿಧಿಗಳನ್ನೂ ಇತರರೆಲ್ಲಾ ಕೂಡಿ ಇತರ ಪ್ರತಿನಿಧಿಗಳನ್ನೂ ಕಳುಹಿಸಬೇಕು. ಆ ಪ್ರತಿನಿಧಿಗಳು ಕೂಡಿಯುಂಟಾಗುವ ಸಮಿತಿಯು ಬಂಗಾಳ ಅಸ್ಸಾಮ್ ಪ್ರದೇಶಗಳ ಮುಂದಿನ ರಾಜ್ಯಾಂಗರಚನೆಯು ಹೇಗಾಗಬೇಕೆಂದು ನಿಶ್ಚಯ ಮಾಡಬೇಕು. ಬಂಗಾಳದ ಬಗ್ಗೆ ಪ್ರತ್ಯೇಕ, ಅಸ್ಸಾಮಿನ ಬಗ್ಗೆ ಪ್ರತ್ಯೇಕ ರಚನೆಯನ್ನು ಮಾಡಿ, ಅವರು ಬಂಗಾಳ ಅಸಾಮು ಕೂಡಿದ ಪ್ರದೇಶಕ್ಕೆ ಸಹಾ ಪ್ರತ್ಯೇಕ ರಚನೆಯಾಗಬೇಕೆಂದು ನಿಶ್ಚೈಸಿದರೆ—ಹಾಗೆಯೂ ರಚಿಸಬಹುದು. ಇದೇ ರೀತಿ ಸಿಂಧು ಪಂಜಾಬ್, ಗಡಿನಾಡು ಪ್ರಾಂತ್ಯಗಳಲ್ಲಿಯೂ ರಾಜ್ಯಾಂಗರಚನೆಯಾಗಬೇಕು. ಉಳಿದ ಹಿಂದೂಸ್ಥಾನದ ಪ್ರದೇಶದಲ್ಲಿಯೂ ರಾಜ್ಯಾಂಗ ರಚನೆಯಾಗಬೇಕು. ಹಾಗೆ ಪ್ರತ್ಯೇಕ ಮೂರು ರಾಜ್ಯಾಂಗ ರಚನೆಗಳಾದ ಬಳಿಕ ಮೂರು ಪ್ರದೇಶಗಳಪ್ರತಿನಿಧಿಗಳೂ ಒಂದಾಗಿ ಸೇರಿ ಸಮಗ್ರ ಹಿಂದೀ ರಾಜ್ಯಾಂಗರಚನೆಯನ್ನು ಮಾಡಬೇಕು. ತಮಗೆ ಈಗ ನಿಶ್ಚೈಸಿದ ಪ್ರಾದೇಶಿಕ ಕೂಟವು ಸರಿಯಲ್ಲ ಯಾ ಅಗತ್ಯವಿಲ್ಲವೆಂದು ಯಾವದಾದರೂ ಪ್ರಾಂತವು ಹೇಳುವುದಿದ್ದರೆ ಹೊಸ ರಾಜ್ಯಾಂಗರಚನೆಯಾದ ಬಳಿಕ ಆ ರಚನೆಗನುಸಾರವಾಗಿ ಕೂಡುವ ಶಾಸನಸಭೆಯಲ್ಲಿ ಬಹುಮತದಿಂದ ಹಾಗೆ ನಿಶ್ಚೈಸಿಕೊಂಡು, ಈಗಿನ ಪ್ರಾದೇಶಿಕ ಕೂಟವನ್ನು ಬಿಟ್ಟುಬಿಡಬಹುದು. ಮೂರು ಪ್ರಾದೇಶಿಕ ಕೂಟಗಳೂ ಈಗ ತಮ್ಮ ತಮ್ಮ ಒಳ ರಾಜ್ಯಾಂಗರಚನೆಯನ್ನು ಮಾಡಿಕೊಂಡಾದ ಬಳಿಕ ನರೇಂದ್ರ ಪಾಲಿತ ಸಂಸ್ಥಾನಗಳು ಕಳುಹಿಸಿದ ಪ್ರತಿನಿಧಿ[illegible]ಡನೆ [illegible] ಸಮಗ್ರ ಹಿಂದುಸ್ಥಾನದ ಬಗ್ಗೆ ರಾಜ್ಯಾಂಗ ರಚನೆಯನ್ನು ನಿಶ್ಚೈಸಬೇಕು. ಅವರು ನಿಶ್ಚೈಸಿದಂತೆ ಜನಿಸುವ ಕೇಂದ್ರ ಸರಕಾರಕ್ಕೆ ಭಾರತ ರಕ್ಷಣೆ, ವಿದೇಶ ವ್ಯವಹಾರ, ಮಾರ್ಗವಾಹನ ವಗೈರೆಗಳು—ಇವುಗಳ ಮೇಲೆ ಮಾತ್ರ ಅಧಿಕಾರ ಎದ್ದು ಉಳಿದ ರಾಜ್ಯಾಧಿಕಾರಗಳೆಲ್ಲಾ ಆಯಾಯ ಪ್ರಾದೇಶಿಕ ಕೂಟಗಳಿಗೂ ಪ್ರಾಂತ್ಯಗಳಿಗೂ ಸಂಸ್ಥಾನಗಳಿಗೂ ಉಳಿಯುವವು.

ಭಾರತ ಐಕ್ಯತೆಯ ಸಮಸ್ಯೆಯನ್ನು ಈ ರೀತಿ ಬ್ರಿಟಿಷ್ ಸಚಿವರು ಬಹಳ ವಿಚಾರ, ಅತ್ಯಂತ ಶ್ರಮ, ಅನಂತ ನಿಪುಣತೆಯಿಂದ ಬಗೆಹರಿಸಿರುವರು. ಅವರ ಯೋಜನೆಯಿಂದ ಸಂಪೂರ್ಣ ತೃಪ್ತಿಯು ಯಾವ ಪಕ್ಷದವರಿಗೂ ದೊರೆಯದಿರಬಹುದಾದರೂ ಅದಕ್ಕಿಂತ ಹಿಂದೀ ಉನ್ನತಿಗೆ ಸಹಾಯಕವಾಗ ಬಹುದಾದ ಯೋಜನೆಯನ್ನು ಕಂಡು ಹಿಡಿಯುವದು ಸುಲಭವಲ್ಲ.

ಸಿಮ್ಲ ಸಮ್ಮೇಳನವಾದ ಬಳಿಕ ಜಿನ್ನಾ ಸಾಹೇಬರು ಸಿಮ್ಲದಲ್ಲಿಯೇ ಉಳಿಕೊಂಡಿರುವರು. "ಪಾಕಿಸ್ತಾನ, ಪಾಕಿಸ್ತಾನ"ವೆಂಬುದೊಂದೇ ಅವರ ಇತ್ತೀಚಿಗಿನ ಜೀವನದ ಧ್ಯೇಯವಾಗಿದ್ದರಿಂದ ಇಂದಿನ ತೀರ್ಮಾನದ ಬಳಿಕ ಅವರಿಗೆ ಕಾರ್ಯಕಲಾಪಗಳೇನೂ ಉಳಿದಿರುವುದಿಲ್ಲ. ತಾತ್ಕಾಲಿಕ ಕೇಂದ್ರ ಸರಕಾರವೊಂದು ಕೆಲವೇ ದಿನಗಳಲ್ಲಿ ನಿರ್ಮಾಣವಾಗಲಿಕ್ಕಿದೆ. ಲೀಗಿನ ಕಡೆಯಿಂದ ಆ ಸರಕಾರಕ್ಕೆ ಸೇರಬಹುದಾದ ಪ್ರತಿನಿಧಿಗಳ ಹೆಸರನ್ನು ಅವರು ಸೂಚಿಸುವರೋ ಸಿಮ್ಲದಿಂದಲೇ ಅವರು ಅವರ ಹಿಂದೂ ಪೂರ್ವಜರಂತೆ ಹಿಮಾಚಲವನ್ನು ಹತ್ತಿ ತಪಸ್ಸನ್ನು ಪ್ರಾರಂಭಿಸುವರೋ ತಿಳಿಯದು.

(೬ನೇ ಪುಟ ನೋಡಿ)

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಯಾ ಅನ್ಯಾವ ಕಾರಣವಿದ್ದರೂ — 'ಕುಮಾರಿ' (Govt. Regd.) ನಿಶ್ಚಿತ ನಿರುಪದ್ರವಿ. ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಘಂಟೆಗಳಲ್ಲಿ ಹರಿಯುವುದು. ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ!! ಬೆಲೆ ರೂ. 3/-. ದೀರ್ಘಕಾಲದ ಮತ್ತು ಕಠಿಣತರ ಸಂದರ್ಭಗಳಿಗೆ ವಿಶೇಷ ತಯಾರಿ. ರೂ. 5/-. ಪ್ರತಿ 6ತಿಂಗಳ ಸಂತತಿ ಪ್ರತಿಬಂಧಕಕ್ಕೆ ರೂ. 4/; (ವಿ. ಪಿ. 12 ಆಣೆ ಹೆಚ್ಚಿಗೆ.) Mrs. P. Devee F. D. S. (K) Tollygunge, Calcutta.

ಸ್ಟಾಕಿಸ್ಟರು:- ಸಾ ಕಂಪನಿ, ಮಂಗಳೂರು.



ಪುರುಷರೇ!... ಚರ್ಮಾರೋಗ್ಯಕ್ಕೆ ರೆಕ್ಸೋನ ವನ್ನು ಉಪಯೋಗಿಸಿರಿ

ರೆಕ್ಸೋನ ಹೆಂಗಸರಿಗೆ ಮಾತ್ರ ಹೊಸ ಆವಿಷ್ಕಾರವನ್ನು ತಾಳುವ ಸೋಪು ಎಂದು ಅತ್ಯುದ್ಗಾರದಿಂದ ಭಾವಿಸಬೇಡಿರಿ. ಚರ್ಮಾರೋಗ್ಯಕ್ಕೆ ಬೆಲೆಕೊಡುವ ಪ್ರತಿಯೊಬ್ಬರಿಗೂ, ಇದು ಬೇಕಾದ ಟಾಯಿಲೆಟ್ ಸೋಪು ಮತ್ತು ಗಂಡಸರು ವಿಶೇಷವಾಗಿ ಅನುಭವಿಸುವ, ಚೈತನ್ಯ ಮತ್ತು ಉಲ್ಲಾಸವನ್ನು ರಟು ಮಾಡುವ ಸೋಪು.

ಈ ಸೊಗಸಾದ, ಜಾಗ್ರತೆ ನೊರೆ ಬರುವ ಹಸುರು ಸೋಪಿನ ಹೆಚ್ಚಿನ ಗುಣವೇನೆಂದರೆ, ಇದರಲ್ಲಿ ತಂಪು ಮಾಡುವ ಮತ್ತು ಗುಣಕಾರಿಯಾದ, ಚರ್ಮ—ವಿಷಾಪಹಾರಕ ಶಕ್ತಿಯುಳ್ಳ ಕ್ಯಾಡಿಲನ್ನು ಮಿಶ್ರಮಾಡಿದೆ. ರೆಕ್ಸೋನದಲ್ಲಿ ಬೇಗ ಬರುವ ಹೆಚ್ಚು ನೊರೆಯು ಈ ಕ್ಯಾಡಿಲನ್ನು, ಆಗಾಗ್ಗೆ ಹುಟ್ಟುವ ಚರ್ಮವ್ಯಾಧಿಗಳಿಗೆ ಜಾಗವಾದ ನಿಮ್ಮ ಚರ್ಮದ ಪ್ರತಿಯೊಂದು ರಂಧ್ರಗಳಿಗೂ ತೆಗೆದುಕೊಂಡು ಹೋಗುತ್ತದೆ. ಇದರಿಂದ ನಿಮ್ಮ ಚರ್ಮವೆಲ್ಲಾ ತಂಪಾಗಿಯೂ, ಪರಿಶುದ್ಧವಾಗಿಯೂ, ಸ್ವಚ್ಛವಾಗಿಯೂ ಆಗುತ್ತದೆ.

ಆದ್ದರಿಂದ ರೆಕ್ಸೋನವನ್ನು ಉಪಯೋಗಿಸಲು ಇಂದಿನಿಂದಲೇ ಪ್ರಾರಂಭಿಸಿರಿ — ಮತ್ತು ಕ್ರಮವಾಗಿ ಉಪಯೋಗಿಸಿರಿ.

★ರೆಕ್ಸೋನದಲ್ಲಿರುವ ಕ್ಯಾಡಿಲ್ ಎಂಬ ವಿಶೇಷ ಮಿಶ್ರಣವು, ಚರ್ಮವನ್ನು ಆರೋಗ್ಯದಿಂದಿಡಲು ಹೆಚ್ಚು ಪರಿಣಾಮಕಾರಿಯಾಗಿರುವ, ಗುಣಕಾರಿಯಾದ ಮತ್ತು ಪೋಷಣೆಯ ಎಣ್ಣೆಗಳುಳ್ಳ ಒರದು ವಿಷಾಪಹಾರಕ ವಸ್ತು. ಕ್ಯಾಡಿಲ್‌ನ ತಂಪುಮಾಡುವ ಮತ್ತು ಕಾಪಾಡುವ ಶಕ್ತಿಯನ್ನು ಶಾಸ್ತ್ರಜ್ಞರು ಒಪ್ಪಿ ಶಿಫಾರಸು ಮಾಡಿದ್ದಾರೆ.

ರೆಕ್ಸೋನ ಮಲಾಮನ್ನು ಉಪಯೋಗಿಸಿರಿ. ಗಾಯ, ಹುಣ್ಣು, ಕುರು, ಇಜ್ಜಲು, ವ್ರಣ, ಮಡಿವೆ, ಬೆವರು ಸಾಲೆ, ಪಿತ್ತಗಂಧೆ, ಹುಳುಕಡ್ಡಿ, ತಲೆಯ ಹುಣ್ಣು ಮತ್ತು ಎಲ್ಲಾ ಚರ್ಮ ರೋಗಗಳಿಗೂ ಉಪಯೋಗಿಸಿರಿ.

RP. 28-50-40 KN

REXONA PROPRIETARY LIMITED

The Badavara Bandhu Group Enterprises

Editors, Printers, Publishers, Bankers, Merchants, Fish Dealers, Motion Picture Producers, Exhibitors, Benefactors, Property Dealers, Provision Dealers, etc., etc,

THROUGH

THEIR ASSOCIATED CONCERNS

1. The Badavara Bandhu.
2. The Badavara Bandhu Printing Press, Ltd.
3. Sri Narayana Guru Press.
4. Sri Narayana Guru Bank Ltd.
5. The South Kanara Fish Industries, Ltd.
6. The Karnataka Theatres, Ltd.
7. Janasons, Ltd.
8. The Badavara Bandhu Colonies.
9. The Badavara Bandhu Orphanage Trust.
10. My Stores.
11. The Vijaya Stores, Ltd.
12. The Badavara Bandhu Hosieries.
13. The West Coast Ice Factory,

Head Office:
MANGALORE, South India.
Telegraphic address:
1 BADAVARA BANDHU
2 MONEY
Post Box: No. 110

Pandit Bank, Mangalore
ಪಂಡಿತ್ ಬ್ಯೇಂಕ್,
ಕೋರ್ಟು ರಸ್ತೆ, ಮಂಗಳೂರು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡೆಸಲಾಗುವುವು. ಮುಖ್ಯವಾಗಿ ಚಿನ್ನಾಭರಣ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು

ಚಿನ್ನಾಭರಣ ಈಡಿನ ಮೇಲೆಹಣವನ್ನು ಕೊಡುವುದು ಈ ಬೇಂಕಿನ ವಿಶೇಷ ಗುಣ. (Speciality) ಇದರಲ್ಲಿ ರಿಯಾಯ್ತಿಯೂ ವಿಶೇಷ–ಬಡ್ಡಿಯೂ ಬಹಳ ಸುಲಭ–ರಖಂ ದೊಡ್ಡದಾದ ಹಾಗೆ ಬಡ್ಡಿ ಮತ್ತಷ್ಟು ಕಡಿಮೆ.

ಕಾಯಂ ಠೇವಣಾತಿಗಳು:
6 ತಿಂಗಳುಗಳಿಗೆ ಸೇ. 2%
1 ವರ್ಷಕ್ಕೆ ಸೇ. 2½%
ಚಾಲ್ತಿ ಠೇವಣಾತಿ:
ಪ್ರತಿದಿನದ ಶಿಲ್ಕಿನ ಮೇಲೆ ಸೇ. ½%
ಸೇವಿಂಗ್ಸ್ ಬ್ಯಾಂಕ್: ಸೇ. 1½%

PANDIT SHIVA RAO, B.A., LL.B.
SOLE PROPRIETOR.
PANDIT DEVADAS RAO,
AGENT.

ಯೋಗ್ಯ ದರದಲ್ಲಿ ಉತ್ತಮ ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಫುಕಟಾ

ಕಳುಹಿಸಿಕೊಡುವೆವು. ಹಿತ್ತಾಳೆ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ,
ಭ್ಯಾಂಡೆ ವ್ಯಾಪಾರಿ, ಉಡುಪಿ, ದ. ಕ.

Kalmanje Vyasacharya
Brass-ware Merchant,
UDIPI, S. I.

THE CANARA BANKING CORPORATION LIMITED.

ESTD: 1906.

(Incorporated in British India with limited liability.)

SEASON DEPOSITS

for Rs. 10,000 and above are now accepted at all offices of the Corporation at the following rates

3—4 months 2¼% 6 months 2½%

These deposits will however not be accepted to run beyond 31—8—1946

With a net work of Branches and Agencies we offer the best of banking facilities.

XXVIII] ಮಂಗಳೂರು ಕಾರೀಕು ೨೧—೫—೧೯೪೬ [೧೫
೧೯೬೪ ವ್ಯಯ ಸಂವತ್ಸರದ ವೈಶಾಖ ಬ।೫ ಮಂಗಳವಾರ

ಗತ ವಾರದ ಭಾರತ–ಮುಂದೇನು?

—0—

ಗತ ವಾರವು ಭಾರತದಲ್ಲೊಂದು ಇತಿಹಾಸ ಪ್ರಸಿದ್ಧವಾದ ವಾರವಾಗಿದೆ. ಈ ವಾರವನ್ನೂ ಅಂತ್ಯವಾಗಿಲ್ಲ. ಮಹತ್ವದ ಘಟನೆಗಳು ಈ ವಾರದಲ್ಲಿಯೂ ನಡೆಯಲಿವೆ. ಇವೆಲ್ಲದರ ಪರಿಣಾಮವಾಗಿ ರಾಜಕೀಯ ಭಾರತೀಯ ಸ್ವರೂಪವು ಬದಲಾಗಿ ಸಮಗ್ರ ಭಾರತದಲ್ಲಿ ಸ್ವಾತಂತ್ರ್ಯದ ತಂಗಾಳಿ ಬೀಸುವುದೆಂದು ನಂಬಲಾಗಿದೆ.

ಗತ ವಾರದಲ್ಲಿ ನಡೆದಿರುವ ಘಟನೆಗಳು ಒಂದೆರಡಲ್ಲ. ಮಂತ್ರಿಗಳು ಮೂವರೂ ವೈಸರಾಯರೂ ಕೊಟ್ಟಿರುವ ಆ ಪ್ರಾಮುಖ್ಯ ಸೂಚನೆಗಳು ಯಾವುವೆಂಬುದೂ, ಈ ಕುರಿತಾಗಿ ಪತ್ರಿಕೋದ್ಯಮಿಗಳಿಗೂ ಭಾರತ ಸಚಿವರಿಗೂ ನಡೆದ ಪ್ರಶ್ನೋತ್ತರಗಳೇನೆಂಬುದೂ ಇಷ್ಟರಲ್ಲಿಯೇ ಎಲ್ಲರಿಗೂ ತಿಳಿದು ಹೋಗಿದೆ.

ವೈಸರಾಯರು ಕಳೆದ ತಾ. ೧೭ರ ರಾತ್ರಿ ಡಿಲ್ಲಿಯಿಂದ ಮಾಡಿದ ಆ ಬ್ರಾಡ್‌ಕಾಸ್ಟ್ ಭಾಷಣದಲ್ಲಿ—ಹೊಸ ರಾಜ್ಯಘಟನೆಯು ನಿರ್ಮಾಣವಾಗುವ ವರೆಗೆ, ಯಾರು ಭಾರತೀಯರ ವಿಶ್ವಾಸಪಾತ್ರರಾಗಿರುವರೋ, ಭಾರತೀಯರನ್ನು ಅವರ ಗುರಿ ಮುಟ್ಟುವಂತೆ ಯಾರು ಮುನ್ನಡೆಸಬಲ್ಲರೋ ಅಂಥ ಅತ್ಯಂತ ಸಮರ್ಥ ಹಿಂದೀ ಮುಖಂಡರ ಕೈಯಲ್ಲಿಯೇ ಇಂಡಿಯಾ ಸರಕಾರವಿರಬೇಕೆಂದೂ; ಅದು ಸಂಪೂರ್ಣವಾಗಿಯೂ ಹಿಂದೀ ಸರಕಾರವೇ ಆಗಿರುವುದೆಂದೂ, ಗವರ್ನರ್ ಜನರಲರು ಮಾತ್ರ ಅದರ ನಾಯಕರಾಗಿರುವರೆಂದೂ ತಿಳಿಸಿರುವರು. ಹಿಂದುಸ್ಥಾನದ ಮುಂದಿರುವ ಕೆಲಸ, ಮಧ್ಯಕಾಲದ ಸರಕಾರದ ರಚನೆ, ಮಹತ್ವದ ಪರೀಕ್ಷಾ ಪ್ರಯೋಗ ಇತ್ಯಾದಿಗಳ ಕುರಿತೂ ಎಸ್ತಾರವಾಗಿ ಅವರು ವಿವರಿಸಿರುವರು.

ಸರ್ವ ಸೇನಾಪತಿಗಳಾದ ಜನರಲ್ ಸರ್. ಕ್ಲಾಡ್ ಔಚಿನ್‌ಲೆಕ್ ಅವರು ಮಧ್ಯಕಾಲದ ಭಾರತ ಸರಕಾರದಲ್ಲಿ ಸೈನ್ಯದ ವ್ಯವಸ್ಥೆಯ ಕುರಿತಾ[illegible]ಶದೀಕರಿಸುತ್ತ ಯಾವ [illegible]ಾರಗಳೂ ಹಿಂದೀಯ[illegible]ಯ ಮಂತ್ರಿಗಳ ಕೈಯಲ್ಲಿ ಇರುವುದು; ತಾವು ಸರ್ವ ಸೇನಾಪತಿಗಳು—ಬ್ರಿಟನಿನಲ್ಲಿ ಸೇನಾಪತಿಗಳು ಸಿವಿಲಿಯನ್ ಮಂತ್ರಿಗಳ ಕೈಕೆಳಗೆ ಕೆಲಸ ಮಾಡಿದಂತೆ ಇಲ್ಲಿಯೂ ಯುದ್ಧ ಶಾಖಾ ಮಂತ್ರಿಗಳ ಕೈಕೆಳಗೆ ಕೆಲಸ ಮಾಡಿಕೊಂಡಿರುವೆವು ಎಂದು ತಮ್ಮ ಆ ಹಿಂದುಸ್ಥಾನಿ ಬ್ರಾಡ್‌ಕಾಸ್ಟ್ ಭಾಷಣದಲ್ಲಿ ನಿರೂಪಿಸಿ ಬ್ರಿಟಿಶ್ ಸರಕಾರದ ಸೂಚನೆಗಳೇನು ಎಂಬುದನ್ನೂ ವಿಶದೀಕರಿಸಿದರು. ಪಾಕಿಸ್ತಾನವೆಂದಿಗೂ ಮದ್ದಲ್ಲ ಎಂದೇ ಅವರು ಕಂಠೋಕ್ತವಾಗಿ ಸಾರಿದರು.

ಈ ಮಧ್ಯೆ, ಕಾಮನ್ಸ್ ಸಭಾ ಮಂದಿರದಲ್ಲಿ ಎಸ್. ಚರ್ಚ್‌ಹಿಲ್ ಸಾಹೇಬರು,—ಶಿವ ಪೂಜೆಯ ಕರಡಿ ಮರಿಯಂತೆ,—ರೌದ್ರಾವೇಶ ತಾಳಿ ಆರ್ಭಟಿಸುತ್ತ, ಪ್ರಧಾನರನ್ನು ಮೇಲೆ ಕೆಳಗೆ ಮಾಡುತ್ತಿರುವ ಸಮಾಚಾರ ಬಂದಿದೆ. ಆದರೆ ಎಸ್. ಅಮರಿಯವರ ಪರಮ ಗುರುಗಳೂ ಎಸ್. ಜಿನ್ನಾ ಸಾಹೇಬ, ಮುಸ್ಲಿಂ ಲೀಗಿನ ಮಹಾ ಪೋಷಕ ಪಾಲಕ ಪ್ರಭುಗಳೂ ಆದ ಈ ಮಹನೀಯರು, ಪಾಕಿಸ್ತಾನದ ಸೋಲನ್ನು ಕಂಡು ಈ ರೀತಿ ಹಾರಿ ಬೀಳುತ್ತಿರುವುದು ಯಾರಿಗೂ ಆಶ್ಚರ್ಯವನ್ನು ಉಂಟುಮಾಡುವ ಹಾಗಿಲ್ಲ. ವಾಸ್ತವವಾಗಿಯೂ ಎಸ್. ಚರ್ಚ್‌ಹಿಲ್ಲರಂಥ ಅಥರ್ವಣಶಾಸ್ತ್ರವೇತ್ತರಾದ ರಾಜಕಾರಣಿಗಳೊಬ್ಬರು ಇಂಗ್ಲೆಂಡಿನಲ್ಲಿ ಇನ್ನೂ ದೀರ್ಘಾಯುಷಿಗಳಾಗಿ ಬಾಳಿಕೊಂಡಿರುವುದು, ಒಂದು ರೀತಿಯಲ್ಲಿ, ಭಾರತದ ಸ್ವಾತಂತ್ರ್ಯ ಸಾಧನೆಗೆ ಮಹದುಪಕಾರವೇ ಆಗಿದೆ ಎನ್ನಬೇಕು.

ಬ್ರಿಟಿಶ್ ನಿಯೋಗ ಗೋಷ್ಠಿಯವರ ಈ ಸೂಚನೆಗಳನ್ನು ಕಾಂಗ್ರೆಸಿನವರು ಸ್ವೀಕರಿಸಬಹುದೆಂದೂ, ಮಧ್ಯ ಕಾಲದ ಸರಕಾರದ ಮಂತ್ರಿಗಳು ಯಾರಾಗಬೇಕೆಂಬ ಈ ಆಯ್ಕೆಯು ಕೂಡ ಇಷ್ಟರಲ್ಲೇ ಆಗಿರಬೇಕೆಂದೂ ಹೇಳಲಾಗಿದೆ. ಇರಬಹುದು ಆದರೆ ಈ ಎಲ್ಲ ವಿಚಾರಗಳನ್ನು ಕಾಂಗ್ರೆಸ್ ವರ್ಕಿಂಗ್ [illegible] ತಮ್ಮ ಡಿಲ್ಲಿ ಎ[illegible] ಎಮ[illegible]ನಿಗಳ ಶಿಸುತ್ತ[illegible]

ಎಚಾರಗಳನ್ನು ಕೆಲವು ಮಟ್ಟಿಗೆ ಒಪ್ಪಬಹುದಾದರೂ, ಕೆಲವು ಮಟ್ಟಿಗೆ ತಮ್ಮ ಅಭಿಪ್ರಾಯವನ್ನು ಸೂಚಿಸಲೂ ಬಹುದಾಗಿದೆ. ಗಡಿನಾಡು, ಅಸ್ಸಾಂಗಳಂಥ ಪ್ರದೇಶಗಳನ್ನು "ಮುಸ್ಲಿಂ ಕ್ಷೇತ್ರಗಳೆಂದು ಕಾಂಗ್ರೆಸ್ ಒಪ್ಪುವುದೆ? ಇಂಥ ಕೆಲ ಸಂದಿಗ್ಧವಾದ ಅಂಶಗಳಲ್ಲಿ ಕಾಂಗ್ರೆಸ್ ಏನು ಹೇಳಲಿದೆಯೋ ನೋಡಬೇಕು. ಹೇಗೂ ಅದರ ಅಭಿಪ್ರಾಯ ಹೊರಪಡಲು ಇನ್ನು ಹೆಚ್ಚು ಕಾಲ ಬೇಕಿಲ್ಲ.

—

ಇಂಡಿಯಕ್ಕೆ ಬ್ರಿಟಿಶರ ಪರ ಯೋಜನೆ

ಕಳೆದ ತಾ. ೧೬–೧೭ರಲ್ಲಿ, ಬ್ರಿಟಿಶ್ ನಿಯೋಗ ಗೋಷ್ಠಿಯವರೂ ವೈಸರಾಯರೂ ಮೇಲ್ಕಂಡ ವಿಷಯದಲ್ಲಿ ಕೊಟ್ಟ ಹೇಳಿಕೆಗಳ ವರಗಳು ಸಮಗ್ರವಾಗಿ ಈಗ ಪ್ರಕಟವಾಗಿವೆ. ಇದರಲ್ಲಿ ಭಾರತದ ವಿಭಾಗವಾಗಬೇಕೆಂಬ ಮುಸ್ಲಿಂ ಲೀಗಿನ ಕೇಳಿಕೆ ನಿರಾಕರಿಸಲ್ಪಟ್ಟಿದೆ; ಸಮಗ್ರ ಭಾರತಕ್ಕೊಂದು ಯೂನಿಯನೂ ಪ್ರಾಂತಗಳ ಗುಂಪೂ ನಿರ್ಮಾಣವಾಗಲಿವೆ; ಕೊನ್‌ಸ್ಟ್ಯುಯೆಂಟ್ ಎಸೆಂಬ್ಲಿಯನ್ನು ಸೇರಿಸಲು ಏರ್ಪಾಡಾಗಲಿದೆ; ಕೂಡಲೇ ಮಧ್ಯ ಕಾಲದ ಸರಕಾರವೂ ಸ್ಥಾಪನೆಯಾಗಲಿದೆ ಎನ್ನಲಾಗಿದೆ.

ಮಧ್ಯ ಕಾಲದ ಸರಕಾರದಲ್ಲಿನ ಯಾವತ್ತು ಮಂತ್ರಿ ಸ್ಥಾನಗಳೂ—ಯುದ್ಧ ಶಾಖೆಯ ಸಚಿವ ಸ್ಥಾನವು ಕೂಡ—ಜನತೆಯ ವಿಶ್ವಾಸ ಪಾತ್ರರಾದ ಭಾರತದ ಮುಂದಾಳುಗಳ ಪಾಲಿಗೇ ಬರುವುವು.

ಸಿಮ್ಲ ಸಮ್ಮೇಳನದಲ್ಲಿ ಭಾರತದ ಪ್ರಾಮುಖ್ಯ ಪಂಗಡಗಳು ಒಂದು ವಿಷಯ ನಿರ್ಧಾರಕ್ಕೆ ಬರಲಾಗದಿದ್ದುದರಿಂದ ನಿಯೋಗ ಗೋಷ್ಠಿಯವರ ಈ ಸೂಚನೆಗಳು ಮುಂದೆ ಬಂದಿವೆ. ಇದರಲ್ಲಿ ಲೀಗಿನವರ ಭಾರತದ ವಿಭಾಗಕ್ಕಾಗಲೀ ಎರಡು ಪ್ರತ್ಯೇಕ ಸಂಸ್ಥಾನಗಳಿಗಾಗಲೀ ಮನ್ನಣೆ ದೊರಕಿಲ್ಲ. ಬದಲಾಗಿ ಭಾರತದ ಭವಿಷ್ಯದ ರಾಜ್ಯ ರಚನೆಯ ಕುರಿತಾಗಿ ಈ ಸೂಚನೆಗಳಾಗಿವೆ:–

೧) ಭಾರತಕ್ಕೊಂದೇ ಯೂನಿಯನ್ ಇರಬೇಕು; ಆದರಲ್ಲಿ ಬ್ರಿಟಿಶ್ ಇಂಡಿಯವೂ ಆಶ್ರಿತ ಸಂಸ್ಥಾನಗಳೂ ಎರಡೂ ಸೇರಿರಬೇಕು. ಈ ಯೂನಿಯನ್ ವಿದೇಶೀ ಕಾರ್ಯಭಾರ, ರಕ್ಷಣೆ ಮತ್ತು ವಹಿವಾಟ ಸಾಧನಗಳನ್ನು ನೋಡಿಕೊಳ್ಳಬೇಕು; ಅವಕ್ಕೆ ಬೇಕಾದ ಹಣ ಕಾಸನ್ನು ಸಂಗ್ರಹಿಸಲೂ ಆ ಯೂನಿಯನಿಗೆ ಅಧಿಕಾರವಿರಬೇಕು.

೨) ಬ್ರಿಟಿಶ್ ಹಿಂದುಸ್ಥಾನ ಮತ್ತು ಸಂಸ್ಥಾನಗಳೆರಡರ ಪ್ರಾತಿನಿಧ್ಯವುಳ್ಳ ಒಂದು ಕಾರ್ಯಕಾರಿ ಮಂಡಲವೂ ಶಾಸನ ಸಭೆಯೂ ಈ ಯೂನಿಯನಿನಲ್ಲಿ ಇರಬೇಕು.

೩) ಯೂನಿಯನ್ ವಿಷಯಗಳ ಹೊರತಾದ ಇತರ ವಿಷಯಗಳೂ ಆ ಸಂಬಂಧವಾದ ಅಧಿಕಾರಗಳೂ ಪ್ರಾಂತಗಳಿಗಿರಬೇಕು.

೪) ಯೂನಿಯನಿಗೆ ಕೊಟ್ಟ ವಿಷಯಗಳ ಹೊರತಾದ ಇತರ ವಿಷಯಗಳು ದೇಶೀಯ ಸಂಸ್ಥಾನಗಳ ಕೈಯಲ್ಲಿ ಇರುವವು.

೫) ಕಾರ್ಯಕಾರಿ ಮತ್ತು ಶಾಸನ ಸಭಾ ಸಹಿತವಾದ ಪ್ರಾಂತಗಳು ತಮ್ಮ ಗುಂಪನ್ನು ನಿರ್ಮಿಸಿಕೊಳ್ಳುವ ಅಧಿಕಾರ ಅವಕಾಶವಿರಬೇಕು. ಗುಂಪುಗಳು ಪ್ರತಿ

ಯೊಂದೂ ಪ್ರಾಂತ ತೆಗೆದುಕೊಳ್ಳಬೇಕಾದ ಎಷಯಗಳನ್ನು ನಿರ್ಧರಿಸಬೇಕು.

೬) ಯೂನಿಯನಿನ ಮತ್ತು ಪ್ರಾಂತಿಕ ಗುಂಪುಗಳ ರಾಜ್ಯಘಟನೆಗಳಲ್ಲಿ ಒಂದು ಶರ್ತವಿರಬೇಕು; ಆ ಶರ್ತದ ಮೇರೆಗೆ ಎಸೆಂಬ್ಲಿಯ ಬಹು ಸಂಖ್ಯಾಕ ಓಟಿನಂತೆ, ೧೦ ವರ್ಷಗಳ ಬಳಿಕ, ಆ ರಾಜ್ಯಘಟನೆಯ ಪುನರಾಲೋಚನೆಗೆ ಅವಕಾಶವಿರಬೇಕು.

ಈಚೆಗೆ ಚುನಾಯಿಸಿ ಬಂದಿರುವ ಪ್ರಾಂತಿಕ ಎಸೆಂಬ್ಲಿಗಳನ್ನೇ ಚುನಾವಣೆಯ ಸಂಸ್ಥೆಗಳಾಗಿ ಎಣಿಸಬೇಕೆಂಬು ಸೂಚಿಸಲಾಗಿದೆ. ಇದರಲ್ಲಿ ಜನಸಂಖ್ಯೆಗೆ ಅನುಸಾರವಾಗಿ ಪ್ರಾಂತಗಳಿಗೆ ಸ್ಥಾನಗಳಿರುವವು; ಒಂದು ಮಿಲ್ಯ ಪ್ರಜೆಗಳಿಗೆ ಒಂದು ಪ್ರತಿನಿಧಿ ಸ್ಥಾನವಿರುವುದು. ಇದಲ್ಲದೆ ಆಯಾ ಜಾತಿಗಳಿಗೆ ತಕ್ಕಂತೆ ಪ್ರತಿನಿಧಿಗಳನ್ನು ಆರಿಸುವ ಹಂಚಿಕೆಯೂ ಇದರಲ್ಲಿದೆ. ಈ ಪ್ರತಿನಿಧಿಗಳೆಲ್ಲ ಸಾಧ್ಯವಿರುವಷ್ಟು ಬೇಗನೇ ಹೊಸ ದಿಲ್ಲಿಯಲ್ಲಿ ಸೇರುವರು. ವೈಸರಾಯರು ವ್ಯವಹಾರ ಸಮಿತಿಯ ಕಾರ್ಯಭಾರಗಳು ಸಾಗುವ ಹಾಗೆ ಪ್ರಾಂತಿಕ ಶಾಸನ ಸಭೆಗಳು ತಮ್ಮ ಪ್ರತಿನಿಧಿಗಳನ್ನಾರಿಸುವಂತೆ ಏರ್ಪಡಿಸುವರು.

ಇವು ಸೂಚನೆಗಳು. ಆದರೆ ಇವನ್ನು ಸ್ವೀಕರಿಸಬೇಕು; ಇಲ್ಲದಿದ್ದರೆ ಅಪಾಯವೆಂದು ನಿಯೋಗ ಗೋಷ್ಠಿಯವರ ಎಚ್ಚರಿಕೆ.

ಮಧ್ಯ ಕಾಲದ ಸರಕಾರವು ಕೂಡಲೇ ಸ್ಥಾಪನೆಯಾಗಬೇಕು; ಅವನ್ನು ಭಾರತೀಯರೇ ಮಾಡಲಿ ಎನ್ನಲಾಗಿದೆ.

ಪಾಕಿಸ್ತಾನವು ಜಾತಿಯ ಸಮಸ್ಯೆಯನ್ನು ಪರಿಹರಿಸತಕ್ಕುದಲ್ಲವೆಂದು ಗೋಷ್ಠಿಯವರು ಮನಗಂಡಿದ್ದಾರೆ.

———

ವಾರ್ತಾದಾಯಕರ ಸಭೆಯಲ್ಲಿ-ಭಾರತ ಮಂತ್ರಿಗಳ ಹೇಳಿಕೆ

ಕಳೆದ ತಾ. ೧೭ರಲ್ಲಿ ಹೊಸ ದಿಲ್ಲಿಯಲ್ಲಿ ಭಾರತ ಸಚಿವರಾದ ಲಾರ್ಡ್ ಪೆಥಿಕ್ ಲಾರೆನ್ಸರು ವಾರ್ತಾದಾಯಕರ ಸಭೆಯಲ್ಲಿ ಮಾತಾಡುತ್ತ—ಬ್ರಿಟಿಶ್ ಮಂತ್ರಿಗಳೂ ವೈಸರಾಯರೂ ನಿನ್ನೆ ಕೊಟ್ಟ ಹೇಳಿಕೆಗಳು ಅವೇನೂ ಸಿದ್ಧಾಂತವಲ್ಲ; ನಿರ್ಣಯ ಸ್ವಭಾವದವಲ್ಲ; ಅವು ಕೇವಲ ಸೂಚನೆಗಳಷ್ಟೆ. ಸದ್ಯದ ಸ್ಥಿತಿಯಲ್ಲಿ ಬ್ರಿಟಿಶ್ ಗೋಷ್ಠಿಯು ಸೂಚಿಸಿದ ರಾಜ್ಯಘಟನೆಯು ಒಂದು ಪಕ್ಷಕ್ಕೇ ಅನುಕೂಲವಾಗಿಯೂ ಇನ್ನೊಂದು ಪಕ್ಷಕ್ಕೆ ಅನಾನುಕೂಲವಾಗಿಯೂ ಇರುವ ಹಾಗೆ ಮಾಡಲು ಅಸಾಧ್ಯ ಎಂದರು. ಈ ವಾರ್ತಾದಾಯಕರ ಸಭೆ ೨ ಗಂಟೆಗಳ ಕಾಲ ಜರುಗಿತು. ನೂರಕ್ಕೂ ಎಕ್ಕಿ ವಾರ್ತಾದಾಯಕರು ಸೇರಿದ್ದರು. ಅವರು ನೂರಾರು ಪ್ರಶ್ನೆಗಳನ್ನು ಕೇಳಿದರು. ಲಾರ್ಡ್ ಪೆಥಿಕ್ ಲಾರೆನ್ಸರೇ ಆ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಟ್ಟರು. ಆ ಉತ್ತರಗಳು ಕೆಲವು ಹೀಗಿತ್ತು:—

"ಪ್ರಾಂತಗಳಿಗೆ ಪ್ರಾದೇಶಿಕ ಗುಂಪುಗಳ ಸರಕಾರದಿಂದ ಬಿಟ್ಟು ಹೋಗುವ ಹಕ್ಕಿದ್ದರೂ ಅವು ಎರಡು ವರ್ಷಗಳೊಳಗೆ ಬಿಟ್ಟು ಹೋಗಕೂಡದು; ೧೦ ವರ್ಷಗಳ ಬಳಿಕ ಈ ಪ್ರಶ್ನೆಯ ಪುನರಾಲೋಚನೆಗಾಗಿ ಅವು ಕೇಳಬಹುದು. ಒಂದು ಭಾಗದಿಂದ ಹೊರಬಿದ್ದ ಒಂದು ಪ್ರಾಂತವು ಇನ್ನೊಂದು ಪ್ರಾಂತಕ್ಕೆ ಸೇರಿಕೊಳ್ಳುವ ವಿಚಾರವನ್ನು ಘಟನಾ ಸಮಿತಿಯು ನಿರ್ವಹಿಸಬಹುದು.

ಒಂದು ಗುಂಪು ಯೂನಿಯನಿನ ಘಟನೆಯಲ್ಲಿ ಸೇರಬಾರದು ಎಂದು ನಿರ್ಧರಿಸುವ ಮಾತು ಅದು ಕೇವಲ ಕಾಲ್ಪನಿಕ. ಜನಗಳು ಕೂಡಿ ನಡೆಯದಿದ್ದರೆ ಏನು ಮಾಡಬೇಕೆಂದು ಯಾರೂ ಈಗಲೇ ಊಹಿಸಲಾರರು.

ಲಾರ್ಡ್ ಪೆಥಿಕ್ ಲಾರೆನ್ಸರು ರಾಜ್ಯ ಘಟನೆ, ಘಟನಾ ಸಮಿತಿ ಮೊದಲಾದುವುಗಳ ಕುರಿತಾದ ಪ್ರಶ್ನೆಗಳಿಗೆ ಉತ್ತರ ಕೊಟ್ಟರಲ್ಲದೆ, ಮಧ್ಯಕಾಲದ ಸರಕಾರದ ಶಕ್ತಿಯಲ್ಲಿ ಸಂಸ್ಥಾನಗಳ ಮೇಲಿನ ಸಾರ್ವಭೌಮತ್ವ ಈಗಿರುವಂತೇ ಸಾಗುವುದು; ಭಾರತದ ಸ್ವಾತಂತ್ರ್ಯದ ಮಾರ್ಗದಲ್ಲಿ ತಾವು ಅಡ್ಡಿಎಡ್ಡೂರಗಳನ್ನು ಒಡ್ಡಲು ಬಯಸುವುದಿಲ್ಲ; ಬ್ರಿಟಿಶ್ ಇಂಡಿಯದೊಡನೆ ಸಹಕರಿಸಿ ನಡೆಯುವುದೇ ತಮ್ಮುದ್ದೇಶ; ದೇಶೀಯ ಸಂಸ್ಥಾನಗಳ ಮತ್ತು ಬ್ರಿಟಿಶ್ ಪಕ್ರವರ್ತಿ ಪದವಿಯ ಬಾಂಧವ್ಯ ಈಗಿನಂತೇ ಇರುವುದು ಎಂದರು.

ಇಂಡಿಯಾ ಆಫೀಸಿನ ವಿಚಾರದಲ್ಲಿಯೂ ಭಾರತ ಮಂತ್ರಿಗಳು ಕೆಲ ಸಂಗತಿಗಳನ್ನು ಅರುಹಿದರು. ಶೀಘ್ರದಲ್ಲೇ ದೊಡ್ಡ ಬದಲಾವಣೆಗಳಾಗುವುವು; ಅದರ ಪರಿಣಾಮವಾಗಿ ಇಂಡಿಯಾ ಆಫೀಸಿನಲ್ಲಿಯೂ ಸಂಪೂರ್ಣವಾದ ಬದಲಾವಣೆಗಳಾಗುವುವು. ಆ ಬದಲಾವಣೆಗಳನ್ನು ನಿರೀಕ್ಷಿಸಿಕೊಂಡೇ ಈಗ ಆ ಕಾರ್ಯಾಲಯದಲ್ಲಿ ಕೆಲಸ ನಡೆಯುತ್ತಿದೆ ಎಂದು ಅವರು ತಿಳಿಸಿದರು.

ನಿಯೋಗಗೋಷ್ಠಿಯವರ ಯೋಜನೆಗೆ ಮುಖ್ಯ ಪಂಗಡಗಳ ಸಮ್ಮತಿ ದೊರಕಿಸಿಕೊಳ್ಳುವಂತೆ ತಾವು ಯತ್ನಿಸುತ್ತೇವೆ ಎಂಬುದಾಗಿ ಭಾರತ ಸಚಿವರಾಡಿದರು. ಮಧ್ಯಕಾಲದ ಸರಕಾರದಲ್ಲಿ ಇರಬೇಕಾದ ಮುಸ್ಲಿಮರ ಸಂಖ್ಯೆಯನ್ನು ವೈಸರಾಯರು ನಿರ್ಧರಿಸುವರು; ವೈಸರಾಯರು ತಮ್ಮ ವಿಶೇಷಾಧಿಕಾರದ ಉಪಯೋಗದ ಕುರಿತಾಗಿ ಅವರು ಭಾರತದ ಮುಂದಾಳುಗಳೊಡನೆ ಮಾತುಕಥೆ ನಡೆಸುತ್ತಿದ್ದಾರೆ ಎಂದು ಅವರು ತಿಳಿಸಿ ಈ ಪ್ರಕಟಣೆಯ ಕರ್ತರು ತಾವೇ ಎಂದಿರುವರು.

ಭಾರತದ ಮುಂದಿನ ರಾಜ್ಯಘಟನೆಯ ನಿರ್ಣಯದ ಹಕ್ಕನ್ನು ಹಿಂದೀಯರಿಗೆ ಬಿಟ್ಟು ಕೊಡುವ ಅಧಿಕಾರ ಬ್ರಿಟಿಶ್ ನಿಯೋಗ ಗೋಷ್ಠಿಯವರಿಗೆ ಇಲ್ಲವೆಂದು ಎ. ಚರ್ಚ್‌ಹಿಲ್ಲರು ಕಾಮನ್ಸ್ ಸಭಾ ಮಂದಿರದಲ್ಲಿ ಮಾಡಿದ ಭಾಷಣದ ಸಂಬಂಧ ಪತ್ರಿಕೋದ್ಯಮಿಗಳು ಕೆಲ ಪ್ರಶ್ನೆ ಕೇಳಿದರು. ಅದಕ್ಕೆ ಭಾರತ ಮಂತ್ರಿಗಳು—ರಾಜ್ಯಘಟನೆಯನ್ನು ವರ್ಗಾಯಿಸುವ ಹಕ್ಕನ್ನು ಬದಲಾಯಿಸಿಲ್ಲ; ಭಾರತದ ಎಎಥ ಪಂಗಡಗಳ ದೊಂದು ಒಪ್ಪಂದಕ್ಕೆ ಅನುಕೂಲಿಸುವಂತೆ ನಾವು ಆ ಒಪ್ಪಂದದ ಸಂಬಂಧ ಕೆಲ ಸೂಚನೆಗಳಷ್ಟನ್ನೇ ಮಾಡಿದ್ದೇವೆ; ಆ ನೋರೆಗೆ ವೈಸರಾಯರು ಘಟನಾ ಸಮಿತಿಯನ್ನು ಕರೆಯಲು ಸಿದ್ದರಿದ್ದಾರೆ ಎಂದಿರುವರು.

ಇಂಡಿಯಾ ಸೆಕ್ರೆಟರಿಗಳ ವಿನಂತಿ

ಕಳೆದ ತಾ. ೧೬ರಲ್ಲಿ ಭಾರತ ಸಚಿವರಾದ ಲಾರ್ಡ್ ಪೆಥಿಕ್ ಲಾರೆನ್ಸರು ಹೊಸ ದಿಲ್ಲಿಯಿಂದ ಒಂದು ಭಾಷಣ (ಬ್ರೋಡ್‌ಕಾಸ್ಟ್) ಮಾಡುತ್ತ—ಇಂಡಿಯದ ಸಂಬಂಧವಾದ ಹೊಸ ರಾಜ್ಯ ಘಟನೆಯ ಸೂಚನೆಗಳನ್ನು ವಿವರಿಸಿದರು. ಈ ರಾಜ್ಯ ಘಟನೆಯು ನಿರ್ಮಾಣದಲ್ಲಿ ಯಾವತ್ತು ಪಂಗಡಗಳವರೂ ಭಾಗವಹಿಸಬೇಕೆಂದು ವಿನಂತಿಸಿದರು. 'ನಾವು ಮಾಡಿಯಾಯಿತು; ಇನ್ನೂ ನಮ್ಮಿಂದ ಸಾಧ್ಯವಿದ್ದುದನ್ನೆಲ್ಲ ಮಾಡುತ್ತೇವೆ. ಹಿಂದಿಯರ ಕಷ್ಟ ನಿವಾರಣೆಗಾಗಿ ನಮ್ಮಿಂದಾದ ಯಾವತ್ತು ಸಹಾಯವನ್ನೂ ನಾವಿನ್ನೂ ಕೊಡಲು ಸಿದ್ಧರೇ" ಎಂದರು.

ಲಾರ್ಡ್ ಕ್ರಿಪ್ಸರ ಎಚ್ಚರಿಕೆ

ಕಳೆದ ತಾ. ೧೬ರಲ್ಲಿ ಸರ್ ಸ್ಟಾಫರ್ಡ್ ಕ್ರಿಪ್ಸರು ಒಂದು ಪತ್ರಿಕೋದ್ಯಮಿಗಳ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತ—"ಎರಡು ತಿಂಗಳ ಚರ್ಚೆ ಮತ್ತು ಕಷ್ಟದ ಕೆಲಸಗಳನ್ನು ಮುಗಿಸಿದ ಮೇಲೆ, ಇದೇ ಅತ್ಯುತ್ತಮ ಯೋಜನೆಯೆಂದು ಇದನ್ನು ನಾವು ಪ್ರಮಾಣಿಕತೆಯಿಂದ ನಿಮ್ಮ ಮುಂದಿರಿಸಿದ್ದೇವೆ. ತಿರುಗಿ ಇದೇ ವ್ಯವಹಾರವನ್ನು ನಾವು ಆರಂಭಿಸುವುದಿಲ್ಲ. ನಾವು ಹಾಕಿ ಕೊಟ್ಟ ಮೇಲ್ಪಂಕ್ತಿಯನ್ನೇ ಅನುಸರಿಸಿ ನಾವು ಕೆಲಸ ಮುಂದುವರಿಸುತ್ತೇವೆ; ಈ ಯೋಜನೆ ವ್ಯರ್ಥವಾದರೆ, ಸ್ವೀಕಾರಕ್ಕೆ ಅನರ್ಹವಾದರೆ, ಎಂಥ ಗಲಭೆಯಾದೀತು ಇಂಡಿಯದ ಜನರು ಎಷ್ಟು ಕಷ್ಟಪಡಬೇಕಾದೀತು—ನೋಡಿಕೊಳ್ಳಿ" ಎಂದರು.

ವೈಸರಾಯರ ಕೌನ್ಸಿಲು ವಿಸ್ತರಣೆ

ವೈಸರಾಯರ ಎಗ್ಜಿಕ್ಯೂಟಿವ್ ಕೌನ್ಸಿಲಿನ ಒಂದು ಅವಸರದ ಸಭೆ ದಿಲ್ಲಿಯಲ್ಲಿ ಈಚೆಗೆ ಸೇರಿದಾಗ, ವೈಸರಾಯರು ಈ ಕೌನ್ಸಿಲನ್ನು ವಂದಿಸಿ ತಾವು ರಚಿಸಲಿರುವ ಹೊಸ ಕೌನ್ಸಿಲಿನ ವಿಚಾರವನ್ನು ಅರುಹಿದರು.

ನಿಯೋಗಗೋಷ್ಠಿಯವರ ಸೂಚನೆಯ ಕುರಿತು

ನಿಯೋಗಗೋಷ್ಠಿಯವರ ಸೂಚನೆಗಳ ಕುರಿತು— ಕಾಂಗ್ರೆಸಿನವರು ಅವಸರದ ಅಭಿಪ್ರಾಯ ಕೊಡುವಂತಿಲ್ಲ; ಲೀಗಿನವರು ಯಾವ ಅಭಿಪ್ರಾಯವನ್ನೂ ಸೂಚಿಸಿಲ್ಲ; ಸರ್. ಟಿ. ಬಿ. ಸಪ್ರೂಗಳು ಈ ಸೂಚನೆಗಳನ್ನು ಸ್ವಾಗತಿಸಿದ್ದಾರೆ ಎಂದು ಗೊತ್ತಾಗಿದೆ.

ಮೇಲ್ಕಂಡ ಸೂಚನೆಗಳನ್ನು ಸ್ವೀಕರಿಸಲು ಸಮಯವೆಷ್ಟೆಂದು ನಿರ್ಧರಿಸಿಲ್ಲ; ಈ ಸೂಚನೆಗಳು ಕ್ರಿಪ್ಸರ ಸಲಹೆಗಳಿಗಿಂತ ಉತ್ತಮವಾಗಿವೆ ಎಂದು ಕೆಲವು ತಜ್ಞರು ಅಭಿಪ್ರಾಯಪಡುತ್ತಾರೆ.

ಈಜಿಪ್ತಿನಿಂದ ಹೊಸ ಹೊರಟರು

ಮೊದಲೇ ನಿರ್ಧಾರವಾದಂತೆ ಬ್ರಿಟಿಷ್ ಸೇನೆಗಳು ಕೈರೋ ಮತ್ತು ಅಲೆಕ್ಸಾಂಡ್ರಿಯದಿಂದ ಹೊರ ಹೊರಡಲಾರಂ

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇಸನಿಕೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ—ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟೆನೋವು, ವಾಂತಿ, ಅಪಚನ, ತಂಡಿ, ಮೈನೋವು, ಹಲ್ಲುನೋವು ಮಕ್ಕಳ ಕಾಡುವ ವಿಕಾರ ಇತ್ಯಾದಿ ಅನೇಕ ಚಿಲ್ಲರೆ ಬೇನೆಬೇಸನಿಕೆಗಳನ್ನು ಜವೇರಿಯನ್ ಜೀವನ ಮಿಕ್ಶ್ಚರ್ ನಿಸ್ಸಂಕಯವಾಗಿ ಗುಣಪಡಿಸುತ್ತದೆ. ಕಾಲರಾ ಮತ್ತು ಅಮಾಂಕಗಳಂಥ ಘಾತುಕವಾದ ಪೊಕ್ಕು ರೋಗಗಳ ಮೇಲೆ ಜಾದೂದಂತೆ ಇದರ ಉಪಯೋಗವಾಗುತ್ತದೆ. ಡಾಕ್ಟರರಿಲ್ಲದಾಗ ಯಾವಾಗಲೂ ಇದನ್ನು ಉಪಯೋಗವಾಗುವದರಿಂದ ಇವರ ಒಂದು ಬಾಟ್ಲಿಯನ್ನು ಮನೆಯಲ್ಲಿಯೂ ಮತ್ತು ಪ್ರವಾಸದಲ್ಲಿ ಹತ್ತಿರವೂ ಇಟ್ಟುಕೊಳ್ಳುವದು (ಉತ್ಕೃಷ್ಟ ಮುಂಜಾಗ್ರತೆಯ ಉಪಾಯವಾಗಿದೆ) ದೂರದರ್ಶಿತ್ವದ ಲಕ್ಷಣವಾಗಿದೆ. ಕಮಿಸ್ಸರ್ಲಿಯೂ (ಔಷಧ ವ್ಯಾಪಾರಿಗಳಲ್ಲಿಯೂ) ಪಲ್ಯಗಳಲ್ಲಿ ಅಂಗಡಿಕಾರರಲ್ಲಿಯೂ ದೊರೆಯುತ್ತದೆ.

ಎಮ್.ಎಚ್. ಜವೇರಿಯನ್ ಮತ್ತು ಕಂ. ಬ್ರುನ್ಸನ್ ಸ್ಟ್ರೀಟ, ಮುಂಬಾಯಿ ೩.



ಕ. ಆ. ವಿ. ಪಿ. ಕಣ್ಣಿನ ಹಾಸ್ಪಿಟಲು ಖಾಸಬಾಗ, ಬೆಳಗಾವಿ.

ಇಲ್ಲಿಯ ತಜ್ಞ ಕಣ್ಣಿನ ಸರ್ಜನರಾದ ಡಾ. ಎಮ್. ಸಿ. ಮೋದಿಯವರು ಉತ್ತರ ಹಿಂದುಸ್ತಾನ, ಪಂಜಾಬ್, ಮತ್ತು ರಾಜಪುತಾನಾಗಳಲ್ಲಿ ಕಣ್ಣಿನ ಎಷ್ಟೋ ಆಪರೇಶನಗಳನ್ನು ಮಾಡಿ ವಿಶೇಷ ಜ್ಞಾನವನ್ನು ಸಂಪಾದಿಸಿ ತಿರುಗಿ ಬೆಳಗಾವಿಗೆ ಬಂದು ತಮ್ಮ ಕೆಲಸದ ಮೇಲೆ ಹಾಜರಾಗಿದ್ದಾರೆ. ಆದ್ದರಿಂದ ಎಲ್ಲ ಕಣ್ಣಿನ ರೋಗಿಗಳು ಅವರ ಜ್ಞಾನದ ಲಾಭವನ್ನು ಹೊಂದಬಹುದು.

ಸೆಕ್ರೇಟರಿ,
ಕ. ಆ. ವಿ. ಪಿ. ಖಾಸಬಾಗ, ಬೆಳಗಾವಿ.

ಭಿಸಿವೆ ಎಂದು ಖಚಿತವಾಗಿ ತಿಳಿದು ಬಂದಿದೆ. ಈ ವಿಷಯದಲ್ಲಿ ಎಂ. ಜರ್ಜ್‌ಹಿಲ್ಲರು ಪ್ರಶ್ನೆ ಕೇಳಿ ಅದಕ್ಕೆ ಸರಿಯಾದ ಉತ್ತರವು ಕಾಮನ್ಸ್ ಸಭಾ ಮಂದಿರದಲ್ಲಿ ದೊರಕದಿದ್ದರೆ, ಸರಕಾರವನ್ನು ಆಕ್ಷೇಪಿಸಲಾದೀತೆಂದಾಗ, ಬ್ರಿಟಿಷ್ ಪ್ರಧಾನರು ಅಂಥ ಠರಾವನ್ನು ತಾವು ಸ್ವೀಕರಿಸುತ್ತೇವೆಂದರು. ಈ ವಿಷಯದಲ್ಲಿ ಆ ಮಂದಿರದಲ್ಲಿ ಬೇಗನೇ ಚರ್ಚೆ ನಡೆಯಲಿದೆ.

——

ಮಂಗಳೂರು

ಎಸ್. ಐ. ಆರ್‌ನ ಒಂದು ದಿನದ ಮುಷ್ಕರ

ಕಳೆದ ಆದಿತ್ಯವಾರ ತಾ. ೧೯ರಲ್ಲಿ ವೈಯ್ ದಾನಿನಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಶ್ರಯದಲ್ಲಿ ಒಂದು ಸಾರ್ವಜನಿಕ ಸಭೆ ಶ್ರೀ ಬಿ. ವಿ. ಕಕ್ಕಿಲ್ಲಾಯ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಮದ್ರಾಸ್ ಪ್ರಾಂತಿಕ ರೈಲ್ವೆ ಯೂನಿಯನಿನ ವೈಸ್ ಪ್ರೆಸಿಡೆಂಟರಾದ ಶ್ರೀ॥ ಕೆ. ಕೃಷ್ಣ ಪಿಳ್ಳೈ ಮಲಬಾರ್ ಅವರು ಭಾಷಣ ಮಾಡಿದರು. ಈ ರೈಲ್ವೆಯ ಕೆಲ ಮಂದಿ ನೌಕರರನ್ನು ರೈಲ್ವೆ ಅಧಿಕಾರಿಗಳು ಅನ್ಯಾಯವಾಗಿ ಕೆಲಸದಿಂದ ತೆಗೆದು ಹಾಕಿದ್ದಾರೆ; ಅದರ ನಿಷೇಧಾರ್ಥವಾಗಿ ನಾಳೆ ಸೋಮವಾರ ಒಂದು ದಿನ ಎಸ್.ಐ.ಆರ್. ಕೆಲಸಗಾರರು ಮುಷ್ಕರ ಹೂಡುವರು ಎಂದು ಮುಂತಾಗಿ ಭಾಷಣಕಾರರೂ ಅಧ್ಯಕ್ಷರೂ ಎನಿಸಿದರು.

ಅಂದು ಬೆಳಿಗ್ಗೆ ರೈಲ್ವೆ ಕೆಲಸಗಾರರ ಒಂದು ಮೆರವಣಿಗೆಯೂ ನಡೆದಿತ್ತು.

ಮುಷ್ಕರ ಆರಂಭ

ಮುನ್ನಾ ದಿನದ ನಿರ್ಣಯದಂತೆ, ನಿನ್ನೆ (ಸೋಮವಾರ) ರೈಲ್ವೇ ಮಂದಿಯ ಮುಷ್ಕರ ಆರಂಭವಾಗಿದೆ. ಇದು ನಿನ್ನೆ ಒಂದು ದಿನದ ಮಟ್ಟಿಗೆ ಮಾತ್ರ. ನಿನ್ನೆ ಬೆಳಿಗ್ಗೆಯೂ ಈ ಸಂಬಂಧವಾದ ರೈಲ್ವೆ ಕೆಲಸಗಾರರ ಒಂದು ಮೆರವಣಿಗೆ ಇತ್ತು. ಕೆಲಸದಿಂದ ತೆಗೆದು ಹಾಕಿದವರನ್ನು ರೈಲ್ವೆ ಅಧಿಕಾರಿಗಳು ತಿರುಗಿ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂಬುದೂ ಈ ರೈಲ್ವೇ ಮಂದಿಯ ಕೇಳಿಕೆಗಳಲ್ಲಿ ಒಂದಾಗಿತ್ತು.

ನಿನ್ನೆ ಮೈಲ್ ಗಾಡಿ ಮಾತ್ರ ಹೊರಡುವಂತೆ ಕೆಲಸಗಾರರು ಹಿಂದಿನ ರಾತ್ರಿಯೇ ಎಲ್ಲವನ್ನೂ ತಯಾರಿಸಿಟ್ಟಂತೆ, ನಿನ್ನೆ ಬೆಳಗ್ಗೆ ಮೈಲ್ ಮದ್ರಾಸ್ ಕಡೆಗೆ ಹೊರಟಿತ್ತು. ಬೇರೆ ರೈಲ್ ಗಾಡಿಗಳು ನಿನ್ನೆ ಇಲ್ಲಿಂದ ಬೇರೆ ಕಡೆಗಳಿಗೆ ಹೊರಟಿರುವ ವಾರ್ತೆಯೂ ಇದೆ.

——

USE
OUR GENUINE
EUCALYPTUS OIL
FOR ALL
ACHES & PAINS
FOR HEALTH USE
SILVER KING CASTOR OIL
LAKSHMI OIL MILLS, COIMBATORE.

ಸಿದ್ಧವನ ಗುರುಕುಲದ ವರ್ಧಂತಿ ಉತ್ಸವ—

ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಎಂ. ಎಲ್. ಸಿ. ಇವರಿಂದ ಸ್ಥಾಪಿತವಾಗಿ ಇವರ ಕೃಪಾಶ್ರಯದಿಂದಲೇ ನಡೆದು ಬರುತ್ತಿರುವ ಉಜ್ರೆಯ ಸಮೀಪದ ಈಶ್ವರ ಗುರುಕುಲದ ಅಥವಾ ಈ ಭಾರತೀಯ ಸಾಂಸ್ಕೃತಿಕ ಎದ್ಯಾ ಪಾಠಶಾಲೆಯ ವರ್ಧಂತ್ಯುತ್ಸವವು ಆ ಶಾಲೆಯ ವಠಾರದಲ್ಲಿ ಡಾ. ಯು. ಪದ್ಮನಾಭ ಮಲ್ಯ ಎಂ. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೧೭ನೇ ಶುಕ್ರವಾರ ಜರುಗಿತು.

ಪ್ರಾರ್ಥನೆಯಾದ ಬಳಿಕ ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ೫-೬ ವರ್ಷ ಪ್ರಾಯದ ಈ ಪಾಠಶಾಲೆಯ ಜನನಕ್ಕೆ ಕಾರಣಗಳನ್ನು ತಿಳಿಯಪಡಿಸಿ, ಈ ಗುರುಕುಲವು ಸಾಧಿಸಬೇಕಾದ ಉದ್ದೇಶಗಳು ಯಾವುವೆಂದು ಎವರಿಸಿದರು. ಈ ಗುರುಕುಲವು ಇತರ ಶಾಲೆಗಳಂತೆ ಅಲ್ಲದೆ, ತನ್ನದೇ ಆದ ಪಾಠಕ್ರಮಗಳನ್ನು ಏರ್ಪಡಿಸಿಕೊಂಡು ಕನ್ನಡ, ಹಿಂದೀ, ಇಂಗ್ಲಿಷ್, ಸಂಸ್ಕೃತ ಮೊದಲಾದ ಭಾಷೆಗಳನ್ನು ಕಲಿಸುದರೊಂದಿಗೆ "ಎದ್ವಾನ್" ಮೊದಲಾದ ಉಚ್ಚ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರ್ಮಾಡುವುದನ್ನೂ ತನ್ನ ಗುರಿಯಾಗಿ ಇರಿಸಿಕೊಂಡಿದೆ: ಇಲ್ಲಿನ ವಿದ್ಯಾರ್ಥಿಗಳಿಗೆ ಉಚಿತವಾದ ಅಶನವಸನಗಳನ್ನು ಕೊಡಲೂ ಉಪಾಧ್ಯಾಯರಿಗೆ ವೇತನಗಳನ್ನು ಸಲ್ಲಿಸಲೂ ಹಿಂದೆ ಪ್ರತಿ ವರ್ಷಕ್ಕೆ ಸುಮಾರು ೬ ಸಾವಿರದಷ್ಟು ಬೇಕಾಗುತ್ತಿದ್ದರೆ ಕಳೆದ ವರ್ಷ ೮ ಸಾವಿರಗಳಷ್ಟೂ ಖರ್ಚಾಗಿದೆ. ಇದಿಷ್ಟು ಖರ್ಚನ್ನೂ ಈ ಗುರುಕುಲದ ಸ್ಥಾಪಕರಾದ ಶ್ರೀ. ಹೆಗ್ಗಡೆಯವರೇ ಸಹಿಸಿಕೊಂಡಿದ್ದಾರೆ. ಇದಕ್ಕೆ ಸರಕಾರದ ಸಹಾಯ ಧನವಿಲ್ಲ. ಕಳೆದ ಹಿಂದೀ ಪರೀಕ್ಷೆಗೆ ಇಲ್ಲಿಂದ ವಿದ್ಯಾರ್ಥಿಗಳು ಹೋಗಿದ್ದು ನಾನಾ ಪರೀಕ್ಷೆಗಳ ಫಲಿತಾಂಶವು ಅತ್ಯುತ್ತಮವಾಗಿದೆ—ಎಂಬಿತ್ಯಾದಿ ಮುಖ್ಯಾಂಶಗಳು ಈ ಗುರುಕುಲದ ವರದಿಯ ನಿವೇದನದ ಕಾಲದಲ್ಲಿ ತಿಳಿದು ಬಂತು.

ಈ ಗುರುಕುಲದ "ಪಾರಮಾರ್ಥಿಕ ಶಿಕ್ಷಣ"ದ ಕುರಿತು ಶ್ರೀ. ಸಾಬಾಜಿ ಶ್ರೀನಿವಾಸಾಚಾರ್ಯರವರೂ, ಈ ಸಂಸ್ಥೆಯ ಲೌಕಿಕ ಆದರ್ಶ ಹಾಗೂ ಸ್ಥಾಪಕರಾದ ಶ್ರೀ. ಹೆಗ್ಗಡೆಯವರ ವಿದ್ಯಾಪ್ರೇಮ ಔದಾರ್ಯಗಳ ಕುರಿತು ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆ, ಶ್ರೀ. ಏ. ನಾಗಪ್ಪಯ್ಯ (ಡಿ. ಬೋವೆಂಬರ) ಮೊದಲಾದ ಇತರ ದೊಡ್ಡ ಮನುಷ್ಯರೂ ಪ್ರಶಂಸನೀಯ ಭಾಷಣಗಳನ್ನು ಮಾಡಿ ಈ ಸಂಸ್ಥೆಯನ್ನು ಆಶೀರ್ವದಿಸಿದ ಮೇಲೆ ಅಧ್ಯಕ್ಷರು ಕಾಲೋಚಿತವಾದ ಭಾಷಣವನ್ನು ಮಾಡಿ ಸಂತೋಷಪಡಿಸಿದರು. ಶ್ರೀ ಡಿ. ಎಂ. ಹೆಗ್ಗಡೆಯವರು ವಂದಿಸಿದರು.

ರಾತ್ರಿ ವಿದ್ಯಾರ್ಥಿಗಳಿಂದ ಇಂಗ್ಲಿಷ್, ಸಂಸ್ಕೃತ, ಹಿಂದೀ, ಕನ್ನಡ ನಾಟಕಗಳ ಅಭಿನಯವೂ ವಿದ್ಯಾರ್ಥಿಗಳದೇ ಯಕ್ಷಗಾನವೂ ಜನಮನೋರಂಜಕವಾಗಿ ಜರುಗಿತು. ಯಶಸ್ವಿಯಾಗಿ ಅಭಿನಯಿಸಿದ ವಿದ್ಯಾರ್ಥಿಗಳಿಗೆ ಪಾರಿತೋಷಕಗಳ ವಾಗ್ದಾನವಾಯಿತು.

ಈ ಸುಂದರ ಸಮಾರಂಭವನ್ನು ನೋಡಲು ಅಸುಪಾಸಿನ ನೂರಾರು ಮಂದಿ ಮಹಿಳೆಯರೂ ಪುರುಷರೂ ನೆರೆ ಬೆಳಿಗ್ಗೆ ಹಲವಾರು ಸ್ಪರ್ಧೆಗಳೂ ಸಂಜೆ ವಿಜಯಿಗಳಿಗೆ ಅಧ್ಯಕ್ಷರಿಂದ ಬಹುಮಾನ ವಿತರಣೆಯೂ ನಡೆದಿತ್ತು.

——

(೩ನೇ ಪುಟದಿಂದ)

ಜಿನ್ನಾ ಸಾಹೇಬರು ಹೇಗೆ ಮಾಡಿದರೂ ಲೀಗಿನ ಸದಸ್ಯರು ಹೇಗೆ ವರ್ತಿಸಿದರೂ ಉಳಿದ ಹಿಂದೀಯರು ಇನ್ನು ಸಚಿವರು ತೋರಿಸಿಕೊಟ್ಟ ಮಾರ್ಗದಲ್ಲಿ ಮುಂದುವರಿದು ದೀನಾವಸ್ಥೆಯಲ್ಲಿ ಬಿದ್ದಿರುವ ಈ ಪ್ರಾಚೀನ ಭೂಮಿಯನ್ನು ದಾರಿದ್ರ್ಯ, ಬರಗಾಲಗಳ ಬಾಯಿಂದ ತಪ್ಪಿಸಿ ಉನ್ನತಿಯ ಶೋಭೆಗೆ ತರುವ ಪ್ರಯತ್ನಗಳಲ್ಲಿ ಮಗ್ನರಾಗುವರು.

ಹಿಂದುಸ್ಥಾನದ ಸಮಸ್ಯೆಯು ಈ ರೀತಿ ಶಾಂತತೆಯಿಂದ ಬಗೆಹರಿದುದರಿಂದ ಭೂಲೋಕದ ಶಾಂತಿಯು ಸ್ಥಾಪಿತವಾಗಲಿಕ್ಕೆ ಇನ್ನು ಹೆಚ್ಚಿನ ಸಮಯ ಬೇಕಾಗದು. ಇಂಡೋನೇಸ್ಯ, ಬರ್ಮಗಳಲ್ಲಿಯೂ ಮಲಯ ಇಂಡೊಚೀನಗಳಲ್ಲಿಯೂ ಪ್ರಜಾಪ್ರಭುತ್ವದ ಸ್ವಾತಂತ್ರ್ಯವು ತಲೆದೋರಿ, ಪಾಶ್ಚಾತ್ಯ ದರ್ಪವು ಅಂತ್ಯವಾಗುವುದೆಂಬುದರಲ್ಲಿ ಸಂಶಯವಿಲ್ಲ. ಸ್ವತಂತ್ರ, ಬಲಿಷ್ಠ ಹಿಂದುಸ್ಥಾನದ ಮೈತ್ರತ್ವದಿಂದ ಆಂಗ್ಲ ದೇಶಕ್ಕೂ ನೂತನ ಶೋಭೆಯೊದಗಿ, ಆಂಗ್ಲರಿನ್ನು ಅಮೇರಿಕದ ಶರಣನ್ನು ಬಿಟ್ಟು ನೂತನ ಯುಗದ ನೂತನ ಧ್ಯೇಯಗಳನ್ನು ಜಗತ್ತಿನಲ್ಲೆಲ್ಲ ಹರಡ ಪ್ರಾರಂಭಿಸದಿರರು. ನಿಸ್ವಾರ್ಥ ಧ್ಯೇಯಗಳಿಂದ ಇನ್ನು ಜಗತ್ತಿನ ಪೂಜ್ಯತೆಯನ್ನು ಸಂಪಾದಿಸಿಕೊಳ್ಳುವ ಆಂಗ್ಲರನ್ನು ರಶ್ಯ ಅಮೇರಿಕಗಳೂ ಮನ್ನಿಸಿ, ತಾವೂ ಆಂಗ್ಲರಂತೆಯೇ ಲೋಕ ಹಿತೈಷಿಗಳಾಗಬೇಕೆಂದು ಶ್ರಮಿಸದಿರರು. ಲಂಡನ್, ಪಾರಿಸ್, ಮಾಸ್ಕೋ, ವಾಶಿಂಗ್ಟನುಗಳಲ್ಲಿ ಅನುದಿನ ತೋರಿಬರುವ ವಿಜಯಿ ಮಹಾರಾಷ್ಟ್ರಗಳತಿಕ್ಕಾಟಗಳ ಕಡೆ ಇನ್ನು ಭೂಲೋಕವು ಭೀತಿಯಿಂದ ನೋಡುತ್ತಾ ಕುಳಿತಿರಬೇಕಾದ್ದಿಲ್ಲ. ಸ್ಥಿರಶಾಂತಿ ಸ್ಥಾಪನೆಯ ಸಮ್ಮೇಳನವು ಕೂಡುವಷ್ಟರಲ್ಲಿಯೇ ಈ ನಮ್ಮ ಪ್ರಾಚೀನ ಪುಣ್ಯಭೂಮಿಯು ಮಹಾ ರಾಷ್ಟ್ರಗಳೊಂದಿಗೆ ಸಮಾನತೆಯನ್ನು ಸಂಪಾದಿಸಿಕೊಂಡು, ದೂರದರ್ಶಿತ್ವದ ವಿಚಾರಗಳಿಂದ ಮಾನವ ಉದ್ಧಾರವನ್ನೇ ಗುರಿಯಾಗಿಟ್ಟುಕೊಂಡು ಹೊಸ ಯುಗಪ್ರಾರಂಭಕ್ಕೆ ಸಹಾಯವನ್ನು ಮಾಡದಿರದು. ರಶ್ಯದ ಕುಟಿಲ ತಂತ್ರಗಳಿಂದ ಈಗ ಇರಾಣದಲ್ಲಿ ಆಂತರ್ಯುದ್ಧಗಳು ತಪ್ಪುವುದಿಲ್ಲ—ಎದೇಶಾಂಗ ಮಂತ್ರಿ ಕೂಟಗಳೆಷ್ಟು ಸಲ ಕೂಡಿದರೂ ಕಾರ್ಯಾರ್ಥಿಯಾಗುವುದಿಲ್ಲ— ಯಾರಿಗೂ ನಿಶ್ಚಿಂತ ಸುಖವಿಲ್ಲ. ಆಂಗ್ಲರು ಈಗ ಸ್ವಾರ್ಥ ಸಾಮ್ರಾಜ್ಯ ಪಿಪಾಸೆಯನ್ನು ದೂರಮಾಡಿ, ಆಸ್ಯದ ಜನರ ಪ್ರೀತಿಯನ್ನು ಸಂಪಾದಿಸ ಹೊರಟಿರುವರು. ಭ್ರಾತೃ ದ್ರೋಹದ, ರಕ್ತಪಾತದ ಕಮ್ಯುನಿಜಮಿನ ತೌರುಮನೆಯಾದ ರಶ್ಯವು ಇನ್ನು ಆಂಗ್ಲರಲ್ಲಿ ಬೆದರಿಕೆಯನ್ನುಂಟುಮಾಡುವಂತಿಲ್ಲವಾದ್ದರಿಂದ ಸ್ಥಿರಶಾಂತಿಯ ದಿನಗಳು ಬೇಗನೇ ಒದಗುವವು. ಆರ್ಥಿಕ ಸಂಪತ್ತಿನ ಅಮೇರಿಕವೂ ಆಂಗ್ಲರ ಬೆಂಬಲವನ್ನು ಬಿಡುವಂತಿಲ್ಲ. ಇನ್ನು ರಶ್ಯವು ಸಾಮ್ರಾಜ್ಯ ವಿಸ್ತರಣೆಯ ಧ್ಯೇಯವನ್ನು ಬಿಟ್ಟು, ತನ್ನ ದೇಶದೊಳಗೆ ಬಿದ್ದಿರುವ ತನ್ನ ಅಪಾರ, ಅನಂತ ಸಮಸ್ಯೆಗಳ ಕಡೆ ದೃಷ್ಟಿಯನ್ನಿಟ್ಟು,—ಆಂಗ್ಲ ಅಮೆರಿಕಗಳೊಡನೆ ಕೂಡಿ ವರ್ಣಭೇದಗಳಿಲ್ಲದ ಮಾನವ ಸಹೋದರತ್ವದ, ನೂತನ ಯುಗ ಸ್ಥಾಪನೆಗೆ ತಾನೂ ಸೇರದೆ ಉಪಾಯವಿಲ್ಲ.

"V"

—೫೦೫—

ಮಿ ಜಿನ್ನರೂ ರಶ್ಯವೂ

ಮಿ. ಜಿನ್ನರು ತಮ್ಮ ಪಾಕಿಸ್ತಾನದ ಯೋಜನೆಯ ಉದ್ಧಾರಕ್ಕಾಗಿ ರಶ್ಯದವರ ಸಾಹಾಯ ಆಶ್ರಯಗಳನ್ನು ಬಯಸಿದ್ದಾರೆಂದು ವದಂತಿ.

——

ಹುಳುಕಡ್ಡಿ ಮದ್ದು
RINGWORM OINTMENT
AMRUTANJAN Ltd.
BOMBAY. MADRAS. CALCUTTA
ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ
ಅಮೃತಾಂಜನ, ಲಿಮಿಟೆಡ್
ಬೊಂಬಾಯಿ—ಮದ್ರಾಸ್—ಕಲ್ಕತ್ತಾ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆವುದು.

Phone No. 95] ಜಯಾ ಕೆಫೆ [ಫೋನು ನಂಬ್ರ ೯೫
(ರಿಜಿಸ್ಟರ್ಡ್)
ಬ್ರಾಹ್ಮಣರ ಶ್ರೇಷ್ಠ ತರಗತಿಯ
ಬೋರ್ಡಿಂಗ್-ಲಾಜಿಂಗ್
ಹಂಪನಕಟ್ಟೆ, ಮಂಗಳೂರು.
ಶುದ್ಧ ತುಪ್ಪದ ರುಚಿಶುಚಿಯ ಬಗೆಬಗೆಯ
ಸಿಹಿ ತಿಂಡಿ ಸರ್ವದಾ ಸಿದ್ಧವಿದೆ.
ನಮ್ಮ ಕೊಟಡಿಗಳು
ಅಧುನಿಕ ಸರ್ವಾನುಕೂಲತೆಗಳಿಂದ ಸುಸಜ್ಜಿತವಾಗಿವೆ.
ಸಂದರ್ಶಕರ-ಸೇವೆ, ಮೇಲ್ವಿಚಾರ, ಅವರತೃಪ್ತಿಗಳೇ ಸಂಸ್ಥೆಯ ಪ್ರಾಮುಖ್ಯ ಧ್ಯೇಯ
ಎನ್. ವಿ. ಭಟ್,
ಪ್ರೊಪ್ರೈಟರ್.

ವಿನೋದ ಚಿತ್ರ

(ಹೊಸ ತಾಳಗಳು)

ಜೀವನದಲ್ಲಿ ಸಂಗೀತವಿದೆ—ಯಾವಾಗ? ಸಂತೋಷವು ಉಕ್ಕಿ ಬಂದಾಗ. ಅದೇ ಸಂತೋಷಾಧಿಕ್ಯದಿಂದ ಸಂಗೀತವು ನೃತ್ಯವಾಗಿ ಮಾರ್ಪಾಟು ಹೊಂದುವುದೂ ಇದೆ. ಉದಾಹರಣೆಗಾಗಿ, ನಮ್ಮ ಜೋಯಿಸರು, ಭವಿಷ್ಯವನ್ನು ಬಂಗಾರದ ಬಣ್ಣದಿಂದ ನಮ್ಮ ಮುಂದೆ ಬಣ್ಣಿಸುವಾಗ, ನಾವು ಮಾತ್ರವೇಕೆ, ಹೆಂಡತಿ ಮಕ್ಕಳು ಕೂಡ, "ಡಾನ್ಸ್" ಮಾಡಿದ್ದುದು ನಮ್ಮ ಸ್ವಂತ ಅನುಭವವಾಗಿರುತ್ತದೆ. ಇದರ ವಿಷಯ ಆಲೋಚಿಸುವಾಗ, ನಮಗೆ ಕಂಡು ಬಂದ ಮುಖ್ಯ ವಿಷಯಗಳು ಎರಡು. ಮೊದಲನೆಯದು ಜೋಯಿಸರ ವಿಷಯ; ಎರಡನೆಯದು ನಮ್ಮ ವಿಷಯ.

ಜೋಯಿಸರು ಎಂದರೆ—ಜನರಿಗೆಲ್ಲ ಜೋಯ್(Joy)–ಸಂತೋಷ ಈಯುವವರು. ಇಂತಹ ಜೋಯ್ ಅಥವಾ ಜಯದ ಸ್ವರೂಪವು ನಮ್ಮ ಮುಂದೆ ಬಂದು ನಿಂತಾಗ ನಾವು ಸುಲಭವಾಗಿ ನೃತ್ಯವನ್ನಾರಂಭಿಸುತ್ತೇವೆ. ಮೊನ್ನೆ ತಾನೆ ನಾವು ಬೆಳಗ್ಗೇಳುವಾಗ "ಅಣ್ಣಾ ಜಯವಾಗುತೈತೆ ಶುಭವಾಗುತೈತೆ" ಎಂದು ಹಕ್ಕಿಯಂತೆ ಹಾಡುವ ಮನುಷ್ಯ ಪ್ರಾಣಿಯೊಂದನ್ನು ಕೇಳಿ ನಮಗೂ ಒಂದು ಸಲ ಕುಣಿಯೋಣವೆಂದು ತೋರಿತು. ಅವನ ತೈತೆ, ತೈತೆ ಎಂಬ ಅಂತ್ಯಪ್ರಾಸವು ಕುಣಿಯುವಿಕೆಯನ್ನು ಸೂಚಿಸುವುದಲ್ಲವೆ?

ಕುಣಿಯುವಿಕೆಯು ಲಯಬದ್ಧವಾದ ಕಲೆ; ಸಂಗೀತದ ಮಾರ್ಗವೆ ಅದರ ಮಾರ್ಗ. ಆದರೆ ಈಗಿನ ಸಂಗೀತಕ್ಕೂ ಕುಣಿತಕ್ಕೂ ಆ ಹಳೇ ಸಪ್ತ ತಾಳಗಳ ಸಂಬಂಧವು ಕಮ್ಮಿಯಾದುದರಿಂದ ನಾವು ಅದಕ್ಕೆ ಯುಕ್ತವಾದ ಕೆಲವು ಹೊಸ ತಾಳಗಳ ಶೋಧನೆ ಮಾಡಬೇಕಾಯಿತು. ಇನ್ನು ಮುಂದೆ ಬರುವವರು ಈ ಶೋಧನಾ ಕಾರ್ಯವನ್ನು ಮುಂದುವರಿಸಿ ತಾಳಗಳ ಸಂಖ್ಯೆಯನ್ನು ಹೆಚ್ಚಿಸಿದರೆ ಬಹಳ ಅನುಕೂಲವಾಗುತ್ತದೆ.

ನಮಗೆಂದಾದರೂ ಜೀವನದಲ್ಲಿ ಸಿಹಿ ರಸವು ಬಂದು ಸೇರಿದಾಗ ಕೆಲವು ದಿನಗಳವರೆಗೆ ನಾವು ಆ ರಸಾಸ್ವಾದನೆ ಮಾಡಿ, ನಮ್ಮಲ್ಲಿ ಮೇಲಕ್ಕೇರುವ ಹೊಸ ಸಂಗೀತಕ್ಕೆ ಅನುಗುಣವಾದ ಹೊಸ ತಾಳವನ್ನೂ ಉಪಯೋಗಿಸುತ್ತೇವೆ. ರೇಶನ್ ಅಕ್ಕಿಯು ಮುಗಿದು, ತೆಗೆದುಕೊಳ್ಳಲಿಕ್ಕೆ ಅವಶ್ಯವಾಗಿ ಬೇಕಾದ ಆ ದುಡ್ಡಪ್ಪಯ್ಯನು ಎಲ್ಲಿಯೊ ರಜೆಯ ಮೇಲೆ ಹೊರಟು ಹೋದಾಗ, ನಮ್ಮ ಆಪ್ತ ಮಿತ್ರ ರಾಮಪ್ಪನು ಅವನ ಮನೆಯಲ್ಲಿ ಹಬ್ಬದ ಊಟಕ್ಕೆಂದು ಕರೆಯಿತ್ತರೆ ನಮಗೆ ಜೀವನದಲ್ಲಿ ಸಿಹಿ ರಸವೆದೆಯೆಂಬುದು ಸುಲಭವಾಗಿ ಮಂದಟ್ಟಾಗಬಹುದು. ಆಗ ನಮ್ಮಲ್ಲಿ ಬರುವುದು ಹೊಸ ರಾಗ; ಹೊಸ ತಾಳ. ಊಟಕ್ಕೆಲ್ಲಿ ಹೋಗುವುದು ಎಂಬ ಯೋಚನೆಯಲ್ಲಿ ಮುಳುಗಿರುವವರಿಗೆ ಮೇಲಕ್ಕೆಳೆಯುವ ತಾಳವೆ "ರಸ ತಾಳ". ಅಂತಹ ಕರೆಯು ಬಾರದಿದ್ದರೆ ಅವನಿಗೆ ಖಂಡಿತವಾಗಿ ರಸಾತಳ.

ಪತಿತರ ತಾಳ ಪಾತಾಳ. ಅಡಿಗೆ ಬಿದ್ದವರನ್ನು ಮೇಲಕ್ಕೇರಿಸುವುದು ಅಥವಾ ಎತ್ತಿ ಹಿಡಿಯುವುದು ನಮ್ಮಲ್ಲಿ ಅನಾದಿಯಿಂದ ಬೇರೂರಿದ ಧರ್ಮ. ಇದನ್ನು ಚೆನ್ನಾಗಿ ತಿಳಿದು ಪಾತಾಳಿಗಳು ಈ ಹೊಸ ತಾಳವನ್ನು ಹಾಕಿ ಅದರ ಸಹಾಯದಿಂದಲೆ ಸ್ವರ್ಗಕ್ಕೇರುವ ಹಾದಿಯನ್ನು ಕಂಡು ಹಿಡಿದಿರುವರು. ಪಾತಾಳವು ಬಹಳ ಆಳವಾದ ತಾಳ. ಸ್ವರ್ಗಕ್ಕೂ ಪಾತಾಳಕ್ಕೂ ಸಂಕ ಕಟ್ಟುವ ತಾಳ.

ಏಕ್ರಮಾದಿತ್ಯರಾಯನು ಒಂದೇ ಒಂದು ತಾಳವನ್ನು ಹಿಡಿದು, ಅದರ ಪ್ರಯೋಗವನ್ನು ಮಾಡಿ, ಬಹಳ ಅದ್ಭುತಕರವಾದ ಕೆಲಸಗಳನ್ನು ಮಾಡಿ ಕೀರ್ತಿವಂತನಾದನೆಂಬ ಕಥೆಯನ್ನಿಲ್ಲಿ ಎಸ್ತರಿಸಿದರೆ–ಇದೆಲ್ಲ ಹಳೇ ಕತೆಯೆಂದು ನೀವು ನಿರ್ಲಕ್ಷಿಸಬಹುದು. ಆದರೆ ಅದೇ ಬೇತಾಳವನ್ನು ಹಿಡಿದು ಇಡೀ ಜಗತ್ತನ್ನೆಲ್ಲ ತಾವು ಹೇಳಿದಂತೆ ಕುಣಿಸುವ ನಮ್ಮ ಶ್ರೀಮಂತರನ್ನು ನೋಡಿ! ಅವರೂ ಪ್ರಯೋಗಿಸುವ ಬೇತಾಳವು ಹಣವೆಂಬ ದೊಡ್ಡ ಭೂತವೇ. ಏಕ್ರಮಾದಿತ್ಯನು ಹಿಡಿದ ಭೂತವೂ ಅದೇ–ಹಣದಿಂದಲೇ ಅತನು ಸಕಲ ಕಾರ್ಯಸಿದ್ಧಿಯನ್ನು ಪಡೆದುದೆಂಬುದರಲ್ಲಿ ನಿಮಗಾರಿಗೂ ಸಂದೇಹವು ಬೇಡ.

ಇನ್ನು ತಿಂಗಳಿಗೆ ಒಂದೇ ಸಲ ನಮ್ಮ ಕೈಸೇರುವ ಸಂಬಳಕ್ಕಾಗಿ ಕಾದುಕೊಂಡು ಕುಳಿತಿರುವಾಗ ನಾವೆಲ್ಲರೂ ಸಹಜವಾಗಿ ಹಾಕುವ ತಾಳ ಕಾಕ ತಾಳ. ಕಾಗೆಯಿಂದ ಹುಟ್ಟಿರುವಂತಹುದು. ಅದು ಬೆಳಗ್ಗೆ ಎದ್ದು ಹಿಂದಿನ ರಾತ್ರೆಯ ಪಾತ್ರೆಗಳು ಯಾವಾಗ ಹೊರ ಬೀಳುವುದೆಂದು ಎಷ್ಟು ಉತ್ಸುಕತೆಯಿಂದ ಕಾದುಕೊಂಡಿರುತ್ತದೊ ಅಷ್ಟೆ ಉತ್ಸಾಹ ನಿರೀಕ್ಷಣೆಯು ನಮ್ಮ ಸಂಬಳದ ಕಡೆಗೆ ನಮಗಿದೆ. ಅದು ಬರುವ ವರೆಗೆ ತಾಳ ಹಾಕುವ ಕೆಲಸವು ನಮ್ಮದು. ಬಂದ ಮೇಲೆ ಬೇರೆಯವರದು; ಅದೂ ಹೊಸ ತಾಳ. ಅದನ್ನು ಲಯ ತಾಳವೆಂದು ಕರೆದರೆ ತಪ್ಪಾಗದು.

ದೀರ್ಘಾಕಾರವಾದ ಜನರು ತಾವೇ ಉತ್ತಮರೆಂದು ಸಾಧಿಸಲಿಕ್ಕಾಗಿ ಕಂಡು ಹಿಡಿದ ಹೊಸ ತಾಳ ಐತಾಳ. ಇವರೆಲ್ಲ (I Tall) ಎಂಬುದನ್ನು ಜನರಿಗೆ ಶ್ರುತಪಡಿಸುವುದು. ಇಂತಹವರಿಗೆ ಬಹು ಎತ್ತರದಲ್ಲಿರುವ ವಸ್ತುಗಳೂ ಸುಲಭವಾಗಿ ಕೈಗಳಿಗೆ ಎಟಕುವುವು. ದೂರದಲ್ಲಿರುವ ವಸ್ತುಗಳೂ ಹಾಗೆಯೇ; ಕೆಂಗರೂ ಎಂಬ ಪ್ರಾಣಿಗೆ ಮರದ ತುದಿಯಲ್ಲಿರುವ ಚಿಗುರೆಲೆಗಳನ್ನು ಮೇಯುವುದು ಹೇಗೆ ಸುಲಭ ಸಾಧ್ಯವೊ ತದ್ರೀತಿಯಲ್ಲಿ ಉದ್ದವಾದ ಜನರಿಗೆ ಆಕಾಶದಲ್ಲಿರುವ ನಕ್ಷತ್ರಗಳನ್ನು ಹಿಡಿಯುವುದೂ ಕಷ್ಟದ ಕೆಲಸವಲ್ಲ.

ಆದರೆ ಪ್ರಚಾರದಲ್ಲಿರುವ ತಾಳಗಳಲ್ಲೆಲ್ಲ ಅತ್ಯುಚ್ಚ ಸ್ಥಾನಕ್ಕೇರಿದ ತಾಳವಾವುದೆಂದರೆ—ಹರತಾಳ—ಹರನೂ, ಹರಿಯೂ ಏಕಪ್ರಕಾರವಾಗಿ ಮೆಚ್ಚುವ ತಾಳ. ಹರತಾಳವನ್ನು ಆಚರಿಸುವ ದಿನಗಳಲ್ಲಿ ಜನರಿಗೆಲ್ಲ ಎರಾಮಕಾಲ. ಎರಾಮವೆಂಬುದು ಎಲ್ಲಾ ರಾಮರಿಗೆ ಬೇಕಾದ ವಸ್ತು. ಅದುದರಿಂದ ಸಮಸ್ತ ಎಲ್ಲರೂ ತಾಳ ಹಾಕುವುದು ಅಸಹಜವಲ್ಲ. ಅಂಗಡಿಯ ಕೆಲಸಗಾರರೂ, ಕಾರಖಾನೆಯ ಕೂಲಿಗಾರರೂ ಹರತಾಳದ ಸಮಯದಲ್ಲಿ ತಮ್ಮ ದಿನನಿತ್ಯದ ಕೆಲಸದಿಂದ ಬಿಡುಗಡೆ ಹೊಂದಿರುವ ಫಲರೂಪಿಯಾಗಿ ನಾಟಕ, ಸಿನೇಮ, ಸರ್ಕಸಾದಿ ಕಲಾಮಂದಿರಗಳ ಸಂದರ್ಶನದ ಲಾಭವನ್ನು ಪಡೆದು ಹೊಸ ತಾಳಗಳ ಅಭ್ಯಾಸಕ್ಕೆ ಸಹಕಾರಿಯಾಗುತ್ತಾರೆ.

ಎಂ. ಎ. ಪ್ರಭು
(ಮಿತ್ರಮಂಡಳಿಯಿಂದ)

For Best Optical Goods & Rubber Stamps
M. S. PRABHU & Co.
Hampankatta, MANGALORE.
FOUNTAIN PEN REPAIRING A SPECIALITY.

ಅಹಿಂಸೆಯೂ ರಣ ಶೌರ್ಯವೂ

ಹಿಂದೂಸ್ಥಾನದ ರಾಜಕೀಯದಲ್ಲಿ ಸತ್ಯ ಅಹಿಂಸೆಯನ್ನು ಪ್ರಧಾನ ಅಸ್ತ್ರವಾಗಿ ಕಾಂಗ್ರೆಸ್ ಮುಖಂಡರು ಬಳಸುತ್ತಿರುವುದು ಜಗತ್ತಿನ ಕೆಲವರಿಗೆ ಸಖೇದಾಶ್ಚರ್ಯವನ್ನುಂಟುಮಾಡಿರುತ್ತದೆಯಾದರೂ ಜಗತ್ತಿನ ವಿದೇಶ ರಾಜಕೀಯ ರಂಗದಲ್ಲಿ, ಕಾಂಗ್ರೆಸಿನ ಸತ್ಯ—ಅಹಿಂಸಾ ಧೋರಣವು ಆದರ್ಶಪ್ರಾಯವಾಗಿರುತ್ತದೆ.

ಹಿಂಸೆಯು ಶೀಘ್ರ, ಉಗ್ರ, ಅಕ್ರಮಗತಿಯುಳ್ಳದಾಗಿದೆ. ಅಹಿಂಸೆಯು ಮಂದ, ಸರಳ, ಯಶಸ್ವೀಗತಿಯುಳ್ಳದಾಗಿದೆ. ಹಿಂಸೆಯು ರಾಜಕೀಯ ಚಳವಳಿದಲ್ಲಿ ಶೀಘ್ರ ಪರಿಣಾಮಕಾರಿಯಾಗಿದ್ದರೂ ಅನ್ಯಾಯ, ರಕ್ತಪಾತ, ಪ್ರಜಾಕ್ಷೋಭೆ, ಸೊತ್ತುಗಳ ವಿನಾಶ ಇತ್ಯಾದಿಗಳಿಗೆ ತವರುಮನೆಯಾಗಿರುತ್ತದೆ. ಅಹಿಂಸೆಯಲ್ಲಿ ಆತ್ಮಗುಣ, ಸರಳತ್ವ, ವರ್ಜನ, ಅಲ್ಲದೆ ಫಲಕಾರಿಯಾದ ಶೀಲ ವೈಶಿಷ್ಟ್ಯಗಳೂ ಅಂತರ್ಗತವಾಗಿರುತ್ತವೆ.

ಸಪುರವಾಗಿ ಹಾಗೂ ಚೆಲುವಾಗಿ ಇರಬಾರದೇಕೆ?

ಪ್ರತಿ ರಾತ್ರೆಯೂ ಎರಡು ಬೈಲ್‌ಬೀನ್ಸ್ ಸೇವಿಸುವ ಅಮೂಲ್ಯ ಸೂತ್ರವನ್ನನುಸರಿಸಿದ್ದಲ್ಲಿ ಆಹಾರ ಕಡಿತ ಮಾಡದೆ ಅಥವಾ ಉಗ್ರ ಅಂಗಸಾಧನೆ ಮಾಡದೆ ನೀವು ಆರೋಗ್ಯವಾಗಿಯೂ, ಮನಮುಗ್ಧ ಸಪುರವಾಗಿಯೂ ಇರಬಹುದು.

ಬೈಲ್ ಬೀನ್ಸ್ ಸೇವಿಸಿದ ಮರುದಿನವೇ ನೀವು ನಿಮ್ಮಲ್ಲಿ ಉತ್ಸಾಹವನ್ನು ಕಾಣುತ್ತೀರಿ. ನಿಮ್ಮ ತ್ವಕದಲ್ಲಿ ವ್ಯತ್ಯಾಸವನ್ನು ಬೇಗನೆ ಕಂಡುಕೊಳ್ಳುವಿರಿ. ಆದುದರಿಂದ ಪ್ರತಿಯೊಬ್ಬರ ಕೈತುಂಬ ಕವನ್ನೆಬ್ಬಿಸುವ ದೇಹಾಕೃತಿ ಬೇಕಾದರೆ ಬೈಲ್ ಬೀನ್ಸ್‌ನ ಸಹಾಯದಿಂದ "ನಿಜ್ರೆಯಲ್ಲಿರುವಾಗಲೇ ಸಪುರ"ವಾಗಿರಿ.

ಪ್ರತಿದಿನವೂ 1,000,000ಕ್ಕೆ ಮೇಲ್ಪಟ್ಟು ಬೈಲ್ ಬೀನ್ಸ್ ಮಾರಲ್ಪಡುತ್ತವೆ.

ಎಲ್ಲಾ ಔಷಧಿ ವ್ಯಾಪಾರಿಗಳು ಬೈಲ್ ಬೀನ್ಸ್‌ಗಳನ್ನು ಸ್ಟಾಕ್ ಮಾಡುತ್ತಾರೆ.
ಏಜಂಟರು:—ಮೆಸ್ಸರ್ಸ್ ದಾಧಾ ಎಂಡ್ ಕೊ.,
ಪಿ. ಟಿ. ಮದ್ರಾಸು.

ಬೈಲ್ ಬೀನ್ಸ್ ಈ ತೆರ ಮಾಡುತ್ತವೆ: ಬೈಲ್ ಬೀನ್ಸ್ ಶುದ್ಧ ವನಸ್ಪತಿ ಸಾರಗಳಿಂದ ತಯಾರಿಸಿದ್ದಾಗಿವೆ; ಅದು ಕಾರಣ ಪೂರ್ಣ ನಂಬಿಕೆಯಿಂದ ಇವನ್ನು ಕ್ರಮವಾಗಿ ಪ್ರತಿ ರಾತ್ರಿಯಲ್ಲೂ ಸೇವಿಸಬಹುದು. ಇವು ಅಂಗರಚನೆಯನ್ನು ಜೀತನಗೊಳಿಸಿ ರಕ್ತವನ್ನು ಶುದ್ಧ ಮಾಡಿ, ಕೊಬ್ಬುಂಟ್ಮಾಗುವ ಮಲ ಪದಾರ್ಥವನ್ನು ಪ್ರತಿ ದಿನವೂ ಹೊರಗೆಡುವುವು; ಹಾಗೆ, ನಿಮ್ಮ ಆರೋಗ್ಯಾಭಿವೃದ್ಧಿ ಮಾಡಿ, ದೇಹಾಕೃತಿಯನ್ನು ಆಕರ್ಷವಾಗಿ ಮಾಡುವುವು.

BILE BEANS

ಬೈಲ್ ಬೀನ್ಸ್‌ನು ಉಲಾಸವಾಗಿ, ಆರೋಗ್ಯವಾಗಿ ಹಾಗೂ ಒಪ್ಪಾಗಿಡುತ್ತವೆ

ಪ್ರಪಂಚದ ಇತರ ಯಾವುದೇ ಒಂದು ರಾಜಕಾರಣಕ್ಕೆ ಭಾರತದ ರಾಜಕಾರಣಕ್ಕೆ ಇರುವಂತಹ ಉಚ್ಚ ಘನಸ್ಥಿತಿಯೂ ಮನ್ನಣೆಯೂ ಇರುತ್ತಿಲ್ಲ. ಅಹಿಂಸೆಯು ಧಾರ್ಮಿಕವಾಗಿದ್ದರೂ, ಹಿಂಸೆಯಷ್ಟೇ ಒಂದು ರೀತಿಯಲ್ಲಿ ಪೀಡಣೆಯುಳ್ಳದ್ದಾಗಿದೆ ಎನ್ನುವುದನ್ನು ನಾವೆಲ್ಲಿ ಮರೆಯಬಾರದು. ಭಾರತದ ರಾಜಕಾರಣವು, ಅದೇ ಕಾರಣದಿಂದ, ಸಾಮ್ರಾಜ್ಯಶಾಹಿಗಳಿಗೆ ಇಂದು ತಲೆಬೇಸೆಯನ್ನೇ ಉಂಟು ಮಾಡಿ ಅವರಲ್ಲಿ ಕಳವಳವನ್ನು ಹಬ್ಬಿಸಿ, ಅವರಿಗೊಂದು ದೊಡ್ಡ ಪೀಡೆಯಾಗಿ ಪರಿಣಮಿಸಿದೆ.

"ನನಗೆ ಧರ್ಮವು ಬೇರೆಯಿಲ್ಲ; ರಾಜಕಾರಣವು ಬೇರೆಯಲ್ಲ" ಎಂದು ಗಾಂಧಿಜಿಯವರು ಅಡಿಗಡಿಗೆ ಹೇಳಿದ್ದಾರೆ. ಜೀವನದ ಸರ್ವ ರಂಗಗಳಿಗೆ ಧರ್ಮವು ಅನ್ವಯಿಸುತ್ತದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ-ಅದರ ಪರಿಸ್ಥಿತಿಯು ದೆಸೆಗ—ಅಹಿಂಸೆಯೇ ಮುಖ್ಯ ಸಾಧನವಾದ ಅಸ್ತ್ರವೆಂದು ಗಾಂಧಿಜಿಯವರು ಕಂಡುಕೊಂಡೇ, ಕಾಂಗ್ರೆಸಿನ ಧೋರಣೆಯನ್ನು ಸತ್ಯ—ಅಹಿಂಸೆಗೆ ತಿರುಗಿಸಿದುದು.

"ಬ್ರಿಟನು, ಅಮೇರಿಕ, ರಷ್ಯ, ಫ್ರಾನ್ಸುಗಳ ಶಕ್ತಿಯನ್ನು ಗಣಿಸಿದರೆ, ಅವುಗಳೊಡನೆ ಪ್ರತಿಭಟಿಸಿ ವಿಜಯವನ್ನು ಗಳಿಸಲು ಸಾಧ್ಯವಿಲ್ಲ ಎಂದು ನಾವು ತಿಳಿಯಬಲ್ಲೆವು. ಅಟಂ ಬಾಂಬನ್ನು ನೆನೆದಾಗಲಂತೂ ಆ ಚತುರ್ ರಾಷ್ಟ್ರಗಳ ಶಕ್ತಿಯನ್ನು ಅಡಗಿಸಲು ಸರ್ವಥಾ ಪ್ರವೃತ್ತರಾಗಲಾರೆವು ಆದುದರಿಂದಲೇ ನಮ್ಮ ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕೆ ಒಂದು ಸಾಧನಾಯುಕ್ತಿ ಇಲ್ಲವೆ ಒಂದು ಅಸ್ತ್ರ ನಮಗೆ ಬೇಕು.

"ರಷ್ಯದ ವಿಜಯೀ ನಡೆಯನ್ನು ಕಂಡು, ನಾವು ಮೋಸಹೋಗಬಾರದು. ರಷ್ಯದ ಚರಿತ್ರೆಯು, ನಮ್ಮ ಚರಿತ್ರೆಗಿಂತ ಭಿನ್ನ ಸ್ವರೂಪದ್ದಾಗಿದೆ. ಭಾರತವು ರಷ್ಯದ ಹಾಗೆ ಶಸ್ತ್ರ ಸನ್ನದ್ಧ ರಾಷ್ಟ್ರವಲ್ಲ. ಹಿಂದೀಯರಿಗೆ ಅಗತ್ಯವಾದ ಯುದ್ಧೋಪಕರಣಗಳ ತರಬೇತನ್ನು ಕೊಟ್ಟರೂ ಸಹ ಅವರು ಯುದ್ಧಾಸಕ್ತರಾಗಲಾರರು. ಜಪಾನು, ಆಸ್ಟ್ರಾದಲ್ಲಿ ಏನು, ಜಗತ್ತಿನಲ್ಲೇ ಯುದ್ಧೋಪಕರಣಗಳ ಸರ್ವಪ್ರಥಮ ಪ್ರಬಲ ರಾಷ್ಟ್ರವಾಗಿತ್ತು. ಆದರೆ ಅದು ಪತನಗೊಂಡು ವಿಜಯಿಗಳ ಪಾದದಡಿಯಲ್ಲಿ ಉರುಳಿ ಕೊಂಡಿತು. ಆ ವಿಜಯಿಗಳು ನಮಗೆ ಯುದ್ಧದ ತರಬೇತನ್ನು ಕೊಟ್ಟಾರು ಎಂದು ನಾವು ಭಾವಿಸುವುದು ವ್ಯರ್ಥ. ಶುದ್ಧ ಅಹಿಂಸೆಯಾದರೊ ಸೋಲನ್ನರಿಯದು. ಅಹಿಂಸೆಯು ನಟನಾಪೂರ್ವಕವಾಗಿರಕೂಡದು. ಜಗತ್ತಿಗೆ ಪ್ರಳಯವು ಸಂಭವಿಸಿ, ನಾನೊಬ್ಬನೇ ಉಳಿದಂತಾದರೂ ಅಹಿಂಸೆಯ ಸಲುವಾಗಿ ನಾನು ಒಂದು ತೊಟಕು ಕಣ್ಣೀರನ್ನೂ ಹಾಕಲಾರೆ." ಎಂದು ಮಹಾತ್ಮರ ವಾಣಿ

ಅಂದು ಇಟಲಿಯ ಸರ್ವಾಧಿಕಾರಿಯಾಗಿದ್ದ ಮುಸಲೋನಿಯು, ಮಹಾತ್ಮರನ್ನು ಒಂದು ರೀತಿಯ ಹಾಸ್ಯದ ಧಾಟಿಯಲ್ಲಿ ಹೀಗೆ ಕೇಳಿದರು: "ನೀವು ಭಾರತದ ಸ್ವಾತಂತ್ರ್ಯವನ್ನು ಕೇವಲ ಅಹಿಂಸೆಯಿಂದಲೇ ಸಂಪಾದಿಸುವಿರೊ? ಇಟಲಿಯ ಸೈನ್ಯದ ಶಸ್ತ್ರ, ನೀತಿಯ ಕುರಿತು ನಿಮ್ಮ ಅಭಿಮತವೇನು?" ಗಾಂಧಿಜಿಯವರು ಖಂಡತುಂಡವಾಗಿ ಪ್ರತ್ಯುತ್ತರವನ್ನಿತ್ತರು: "ನೀವು ಕಟ್ಟಿದ್ದು ಏಸ್ಸಿಟಿನ ಎಲೆಗಳ ಮನೆ" ಗಾಂಧಿಜಿಯವರ ಮಾತು ಇಂದು ಪೂರ್ಣ ನಿಜವಾಯಿತು.

ನಾಳೆ ಭಾರತಕ್ಕೆ ಸ್ವಾತಂತ್ರ್ಯವು ಲಭಿಸಿದರೆ, ಅಹಿಂಸಾಚರಣೆಯಲ್ಲಿ ತತ್ಪರರಾದ ಹಿಂದೀಯರು, ಸೈನಿಕ ಕಾರ್ಯಾಚರಣೆಯಂತಹ ಕಾರ್ಯದಲ್ಲಿ ಹಿಂದೆ ಬೀಳಲಾರರೆ? ಅವರಿಗೆ ಆ ಕಾರ್ಯದಲ್ಲಿ ಉತ್ಸಾಹ ಆಸ್ಥೆಯು ಮುಂದೆ ಹುಟ್ಟೀತೆ? ಅಹಿಂಸೆಯಿಂದ ಭಾರತೀಯರ ಯುದ್ಧದ ಹುರುಪು ಸಹಜವಾಗಿ ಕಡೆಗುಂದುತ್ತಲ್ಲವೇ? ಈ ಪ್ರಶ್ನೆಗಳನ್ನು ಇತಿಹಾಸದಲ್ಲಿನ ಒಂದು ಉದಾಹರಣೆಯು ಸಮರ್ಥಿಸುತ್ತದೆ.

ಅಶೋಕನ ಅಹಿಂಸಾಚರಣೆಯ ಬೋಧದಿಂದ, ಆತನ ಸೈನಿಕ ವರ್ಗವು, ಕ್ರಮೇಣ, ಯುದ್ಧ ಪ್ರವೃತ್ತಿಯಲ್ಲಿ ಅಸಡ್ಡೆಯನ್ನು ತೋರಿಸಿತು. ಈ ಸಂಧಿಯನ್ನು ಸಾಧಿಸಿ, ಆ ವರೆಗೂ ಅಶೋಕನ ಅಖಂಡ ಸೈನ್ಯ ಬಲದೆ ಹೆದರಿಕೆಯಿಂದ ತಟಸ್ಥರಾಗಿದ್ದ ಹೊರನಾಡಿನ ಶತ್ರುಗಳು ಹಾಗೂ ಇತರ ವಂಶೀಯರು, ತಲೆ ಎತ್ತಿ ಮೆಲ್ಲಮೆಲ್ಲನೆ ಅಶೋಕನ ರಾಜ್ಯದ ಮೇಲೆ ಕಾಲಿಕ್ಕಿ, ಆತನ ಅಹಿಂಸಾರಾಧಕ ಸೈನಿಕರನ್ನು ಸುಲಭದಲ್ಲಿ ಸೋಲಿಸಿ, ತಮ್ಮ ಸಿಂಹಾಸನವನ್ನು ಸ್ಥಾಪಿಸಲು ಮುಂದಾದರು. ಹೀಗೆ ಅಶೋಕ ಸಾಮ್ರಾಜ್ಯದ ಪತನಕ್ಕೆ, ಆತನ ಸೈನಿಕರ ಅಹಿಂಸಾ ಮನೋವೃತ್ತಿಯೂ ಒಂದು ಹೇತುವಾಯಿತು.

ಆದರೆ, ಇಂದು ಹಿಂದೀ ಸೈನಿಕರ ಯುದ್ಧದ ಹುರುಪು ಕಳೆಗುಂದುತ್ತಿದೆ ಎಂಬ ಮಾತಿಗೆ, ಎಳ್ಳಷ್ಟೂ ಅಸ್ಪದವಿಲ್ಲ ಹಿಂದೀ ರಾಷ್ಟ್ರೀಯ ಸೈನಿಕರು, ಸುಭಾಷರ ನೇತೃತ್ವದಲ್ಲಿ, ಭಾರತದ ಸ್ವಾತಂತ್ರ್ಯಕ್ಕಾಗಿ ನಡೆಸಿದ ಆ ಸಂಗ್ರಾಮವು, ಸರ್ವ ಪ್ರಸಿದ್ಧವಾಗಿರುತ್ತದೆ- ಹಿಂದೀಯರ ಯುದ್ಧ ಭಾವನೆ ಬಲಕಾರ್ಯ ಹಾಗೂ ಸ್ವಾತಂತ್ರ್ಯ ಲಾಲಸೆಯು ಲವಮಾತ್ರವೂ ಕುಂದಿಲ್ಲ ಎಂಬುದಕ್ಕೆ, ಇದೇ ನಿದರ್ಶನವು. ಮೇಲಿನಂತಹ ಇತಿಹಾಸ ಘಟನೆಯಲ್ಲಿ, ಆಕ್ರಮಣಗಾರರ ಎರುದ್ಧವಾಗಿ ಅಹಿಂಸಾ ಪದ್ಧತಿಯನ್ನು ಸೈನಿಕರು ಬಳಸಿದುದು ಮೂರ್ಖತನವೆಂದು ಯಾರಿಗೂ ಹೊಳೆಯದಿರಲಾರದು. ಅಶೋಕನು ನಿರ್ದಿಷ್ಟ ವಿಷಯಗಳಲ್ಲಿ ಮಾತ್ರ ಅಹಿಂಸೆಯನ್ನು ಅವರ ಜೀವನದಲ್ಲಿ ಬಳಸಬೇಕೆಂದು ತನ್ನ ಸೈನಿಕರಿಗೆ ಬೋಧಿಸಿ ಅಷ್ಟಕ್ಕೇ ನಿಲ್ಲಿಸದೆ, ಮತಿಗೆಟ್ಟು, ಅವರ ಹೃದಯದಲ್ಲಿ ಆ ವಿಚಾರ ಬೋಧೆಯನ್ನು ತುಂಬಿಸಿದುದೇ ಕೆಡಕನ್ನು ತರುವಂತಾಯಿತು. ಜರ್ಮನಿಯು ರಷ್ಯದ ಮೇಲೆ ಆಕ್ರಮಿಸಿದಾಗ, ರಷ್ಯನರು ಅಹಿಂಸಾ ಧೋರಣೆಯನ್ನು ವಹಿಸಿದ್ದರೆ, ರಷ್ಯವು ಜರ್ಮನಿಯ ವಶವಾಗಿಬಿಡುತ್ತಿತ್ತು. ಒಂದು ರಾಷ್ಟ್ರವು, ಮತ್ತೊಂದು ಜನಾಂಗ ಇಲ್ಲವೆ ರಾಷ್ಟ್ರದ ಮೇಲೆ ಅನ್ಯಾಯವಾಗಿ ದುರಾಗ್ರಹದಿಂದ ತುಂಬಿ ಯುದ್ಧಕ್ಕೆ ಮುಂದಾಗುವಾಗ, ಅದನ್ನು ಪ್ರತಿಭಟಿಸಿ, ಅದರ ತೇಜೋವಧೆಯನ್ನು ಮಾಡಲೇ ಬೇಕು. ರಾಷ್ಟ್ರದ ಭದ್ರತೆ ರಕ್ಷಣೆಯನ್ನು ಸೈನ್ಯ ಬಲದಿಂದ ಕಾಪಿಟ್ಟುಕೊಳ್ಳುವುದು, ಪ್ರತಿಯೊಂದು ರಾಷ್ಟ್ರದ ಸರ್ವ ಪ್ರಥಮ ಕರ್ತವ್ಯವಾದುದಲ್ಲವೆ?

ನಮ್ಮ ಭವಿತವ್ಯವೇನು? ನಾವು ಭಾರತದ ಸ್ವಾತಂತ್ರ್ಯದ ಹೋರಾಟದಲ್ಲಿ ಹೇಗೆ ಮತ್ತು ಯಾವ ಕಾರ್ಯಭಾಗವನ್ನು ವಹಿಸಬೇಕು?—ಈ ಕುರಿತು ಗಾಂಧಿಜಿಯವರೊಡನೆ, ಬಿಡುಗಡೆ ಹೊಂದಿದ ಹಿಂದೀ ರಾಷ್ಟ್ರೀಯ ಸೈನಿಕರು ಪ್ರಶ್ನೆ ಮಾಡಿದಾಗ, ಗಾಂಧಿಜಿಯವರು ಅವರಿಗೆ ತಿರುಗಿ ಸಮರ ಮನ್ನಣೆ ರಾಗುವಂಥ ಉಗ್ರ ಕಾರ್ಯಭಾಗವನ್ನು ಹೂಡಲು ಬೋಧಿಸಲಿಲ್ಲ. ಅವರು ಸತ್ಯ-ಅಹಿಂಸೆಗೆ ಅನುರೂಪವಾದ ಸಾರ್ವತ್ರಿಕ ಸಂಘಟನೆಯ ಕಾರ್ಯಾಚರಣೆಯನ್ನೇ ಬೋಧಿಸಿದರು. ಅಹಿಂಸೆಯ ಐತಿಹ್ಯ ಫಲಗಳನ್ನು ಮನಗಾಣಿಸಿದರು. ರಚನಾತ್ಮಕ ಕಾರ್ಯಕ್ರಮಗಳನ್ನು ಅವರ ಮುಂದಿಟ್ಟರು.

ಕಸ್ತೂರಬಾ ಸ್ಮಾರಕ ನಿಧಿಯ ಕಾರ್ಯ ನಿರ್ವಾಹಕರ ಸಭೆಯೊಂದು ಜರಗಿದಾಗ, ಅದರಲ್ಲಿ ಒಬ್ಬರು ಹೀಗೆ ಕೇಳಿದರು: "ರಾಜಕೀಯ ಗಲಭೆ, ಕ್ರಾಂತಿಗಳು ಅತ್ಯುಗ್ರ ರೂಪವನ್ನು ತಾಳಿ ಮೇಲಕ್ಕೆದ್ದಾಗ, ಅಂತಹ ಪ್ರಸಂಗದಲ್ಲಿ ಜನರು ಹೇಗೆ ವರ್ತಿಸಬೇಕು?" ತಕ್ಷಣ ಗಾಂಧಿಜಿಯವರು ಯೋಗ್ಯ ಉತ್ತರವನ್ನೇ ಕೊಟ್ಟರು. "ಗಲಭೆ, ಕ್ರಾಂತಿಗಳು ಎದ್ದಾಗ, ಅದರಲ್ಲಿ ಜನರು ಭಾಗ ವಹಿಸಕೂಡದು ಎಂಬ ಕ್ರಮವೇನೂ ಇರುತ್ತಿಲ್ಲ. ಕ್ರಾಂತಿಯನ್ನು ಮುರಿಯಲು ಹೋಗಿ, ಆ ಕಾರ್ಯಭಾಗದಲ್ಲಿ ನಿಮ್ಮಲ್ಲಿ ಯಾವನೊಬ್ಬನು—ಏಕೆ—ಎಲ್ಲರೂ ಪ್ರಾಣವನ್ನು ಆಹುತಿ ಕೊಡುವಂತಾದರೂ ನನಗೆ ಅದರಿಂದೇನೂ ದುಃಖವಿಲ್ಲ; ಬದಲು ಅತ್ಯಂತ ಆನಂದಪಡುವೆ. ಕೊಲ್ಲಲ್ಪಡುವುದು ಕಾಯಿದೆ ಸಿದ್ಧವಾದ ಹೊಣೆಗಾರತನವೇ ಎನಾ ಕೊಲೆಯನ್ನು ಎಸಗುವುದರಲ್ಲಿ ಅಡಿರುವುದಿಲ್ಲ."

—ಎಮ್. ಎನ್.

ಕಂಠೀರವನಿಗೆ
ಚಂದಾದಾರರಾಗಿರಿ.



ವಿಪುಲವಾದ ಮತ್ತು ಸುಗಂಧಿತವಾದ ಹಮಾಮ್‌ನ ನೊರೆಯು ಹರ್ಷದಾಯಕವಾಗಿದೆ. ಇದನ್ನು ನಿಮ್ಮ ಸ್ನಾನಕ್ಕೆ ಪ್ರತಿದಿನವೂ ಉಪಯೋಗಿಸಿ. ಎಲ್ಲೆಲ್ಲಿಯೂ ಸಿಗುತ್ತದೆ.

ನಿಮ್ಮ ಆಂಗಡಿಯವನನ್ನು ಹಮಾಮ್ ಸಾಬೂನನ್ನು ಕೊಡಹೇಳಿ.

ದಿ ತಾತಾ ಆಯಿಲ್ ಮಿಲ್ಸ್ ಕಂಪೆನಿ ಲಿಮಿಟೆಡ್.

SOLE AGENTS FOR ARYAN TOOTH BRUSH

ಕಲಾಪಿ ಸ್ಟೋರ್ಸ್, ಸ್ವದೇಶಿ ಮಾರ್ಕೆಟ್ಟು, ಬೊಂಬಾಯಿ 2.

ಶ್ರೀ ಜಯಪ್ರಕಾಶ ನಾರಾಯಣರು

(೫ನೇ ಪುಟದಿಂದ)

ಸಮತಾವಾದ ಪಕ್ಷದ ಉದಯ ಮತ್ತು ಆದರ ಚಟುವಟಿಕೆ

ಶ್ರೀ. ಜಯಪ್ರಕಾಶರ ಬಂಧನವಿಮೋಚನೆಯಾಯಿತು. ಕೂಡಲೇ ಅವರು ತನ್ನ ಚಟುವಟಿಕೆಗಳನ್ನು ಆರಂಭಿಸಿದರು. ಪಾಟ್ನಾದಲ್ಲಿ ೧೯೩೪ರಲ್ಲಿ ಅಖಿಲ ಭಾರತ ಸಮತಾವಾದಿಗಳ ಒಂದು ಮಹಾ ಸಭೆಯನ್ನು ಜರಗಿಸಿದರು. ಆದರ ಅಧ್ಯಕ್ಷತೆಯನ್ನು ಶ್ರೀ. ಆಚಾರ್ಯ ನರೇಂದ್ರ ದೇವರು ವಹಿಸಿದರು. ಅದೇ ಸಂದರ್ಭದಲ್ಲಿ, ಕಾಂಗ್ರೆಸ್ ತನ್ನ ಅಸಹಕಾರ ಚಳವಳಿಯನ್ನು ನಿಲ್ಲಿಸಲು ಸಭೆಯನ್ನು ಕೂಡಿಸಿತ್ತು. ಶ್ರೀ. ಜಯಪ್ರಕಾಶರು ಕಾಂಗ್ರೆಸಿನ ಆ ಧೋರಣೆಯನ್ನು ತೀವ್ರವಾಗಿ ಪ್ರತಿಭಟಿಸಿದರು. ಮತ್ತು ಆ ಸಲುವಾಗಿ ಹೆಚ್ಚು ಕೆಲಸ ಮಾಡಿದರು. ಸಮತಾವಾದ ತತ್ವವನ್ನು ಪ್ರಚಾರಪಡಿಸುತ್ತ, ಅಖಿಲ ಭಾರತವನ್ನು ಸುತ್ತಾಡಿದರು. ಅಲ್ಲಲ್ಲಿ ಸಮತಾವಾದಿ ಮಂದಿಗಳನ್ನು ಒಟ್ಟು ಕೂಡಿಸಿ, ಸಂಘಗಳನ್ನು ಸ್ಥಾಪಿಸಿದರು; ಕೆಲ ತಿಂಗಳಲ್ಲಿ ಬೊಂಬಾಯಿಯಲ್ಲಿ ಸಮತಾವಾದಿ ಪಕ್ಷ ಆರಂಭವಾಯಿತು. ಶ್ರೀ. ಜಯಪ್ರಕಾಶರು ಅದರ ಪ್ರಥಮ ಪ್ರಧಾನ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಕಾಂಗ್ರೆಸು, ಅವರನ್ನು ಕಾರ್ಯಮಂಡಳಿಕ್ಕೆ ಸೇರಿಸಿಕೊಂಡಿತು. ಆದರೆ ತನ್ನ ಪಕ್ಷದ ಕೆಲಸ ಕಾರ್ಯಗಳನ್ನು ಮಾಡುವ ಜವಾಬ್ದಾರಿಯಿಂದ ಶ್ರೀಯುತರು ಹೆಚ್ಚು ಕಾಲ ಅದರಲ್ಲಿ ನಿಲ್ಲಲಿಲ್ಲ. ಲಕ್ನೋ ಮತ್ತು ಫೈಜ್‌ಪುರ ಕಾಂಗ್ರೆಸ್ ಸಮ್ಮೇಳನಗಳು ಜರಗಿದಾಗ, ಶ್ರೀ. ಜಯಪ್ರಕಾಶರು, ಸಮತಾವಾದಿಗಳ ಕಡೆಯಿಂದ ಚರ್ಚೆ–ಮಾತುಕತೆಗಳಲ್ಲಿ ಪ್ರಾಮುಖ್ಯ ಭಾಗವಹಿಸಿ, ದೊಡ್ಡ ತಿಕ್ಕಾಟವನ್ನೇ ಹೂಡಿದ್ದರು. ಅಲ್ಲಿ ಅವರು ಪಡೆದ ಗೆಲುವು ಅವರ ಪಕ್ಷದ ಬೆಳವಣಿಗೆಗೆ ಬಲಕೊಟ್ಟಿತು.

ಬಂಧನ—ಉಪವಾಸ—ಪಲಾಯನ

ಅವರ ತೀವ್ರ ಕಾರ್ಯಕ್ರಮಗಳು ಸರಕಾರದ ಎದೆಗುಂದಿಸಿದುವು. ಸಾಮ್ರಾಜ್ಯ ಆಡಳಿತಕ್ಕೆ ಧಕ್ಕೆ ತರುವಂತಹ ಧೋರಣ, ಕಾರ್ಯಗಳಲ್ಲಿ ಶ್ರೀ. ಜಯಪ್ರಕಾಶರು ಪ್ರವೃತ್ತರಾಗಿದ್ದರು. ೧೯೩೯ರಲ್ಲಿ, ಅವರ ಧಸ್ತಗಿರಿಯಾಯಿತು. ಅವರು ದೇವಲಾಲಿಯಲ್ಲಿ ಸೆರೆಮನೆಯಲ್ಲಿ ಇತರ ಕೈದಿಗಳೊಡನೆ ನಡೆಸಿದ ಉಪವಾಸವು ಗಮನೀಯವಿರುತ್ತದೆ. ಸರಕಾರವು ಕೈದಿಗಳಿಗೆ ಸೌಕರ್ಯಗಳನ್ನು ತಿರಸ್ಕರಿಸಿತ್ತು. ಆದರೆ ೩೧ ದಿವಸಗಳ ಉಪವಾಸದ ಅನಂತರ ಸರಕಾರವು ಶ್ರೀ. ಜಯಪ್ರಕಾಶರಿಗೆ ಮಣಿಯಿತು.

ವೈಯಕ್ತಿಕ ಸತ್ಯಾಗ್ರಹ ತತ್ವ ಧೋರಣೆಗಳ ವಿರುದ್ಧ, ಶ್ರೀ. ಜಯಪ್ರಕಾಶರು ಸೆರೆಮನೆಯಿಂದ ನ್ಯಾಯಬಾಹಿರವಾಗಿ ಕಳಿಸಿದ ಹೇಳಿಕೆ ಕರಪತ್ರಗಳು ಪ್ರಸಿದ್ಧವಿರುತ್ತವೆ. ಅವರ ಈ ಅತಿರೇಕಕ್ಕೆ ಸರಕಾರವು ಕೋಪಗೊಂಡು, ಅವರ ಮೇಲೆ ಅನೇತಿಪರವಾದ ಶಾಸನವನ್ನು ಹೂಡಿತು. ಗಾಂಧೀಜಿಯವರು ಆ ಸರಕಾರಕ್ಕೆ ಆಗ ಕೊಟ್ಟ ಉತ್ತರವು ಆ ಸರಕಾರದ ಹೃದಯಕ್ಕೆ ಇಂದಿಗೂ ಕೊಡಲಿಯ ಪೆಟ್ಟೇ ಸರಿ.

೧೯೪೨ನೇ ನವಂಬರ್ ದೀಪಾವಳಿಯ ರಾತ್ರಿ. ತನ್ನ ಐವರು ಗೆಳೆಯರೊಂದಿಗೆ ಉಟ್ಟ ವಸ್ತ್ರಗಳನ್ನು ಒಂದಕ್ಕೊಂದು ಬಿಗಿದು, ಅದರ ಸಹಾಯದಿಂದ ಕಾವಲುಗಾರರ ಕಣ್ಣು ತಪ್ಪಿಸಿ ದೇವಲಾಲಿ ಸೆರೆಮನೆಯಿಂದ ಅವರು ಪಾರಾದರು. ಸರಕಾರವು ಅವರನ್ನು ಹಿಡಿಯುವ ಸರ್ವ ಪ್ರಯತ್ನಗಳನ್ನೂ ಮಾಡಿತು. ಹಿಡಿದು ಕೊಟ್ಟವರಿಗೆ ೧೦,೦೦೦ ರೂಪಾಯಿ ಬಹುಮಾನ ಕೊಡುವುದಾಗಿಯೂ ಸಾರಿತು. ಸಮತಾವಾದಿ ಗೆಳೆಯರನ್ನು ಒಟ್ಟುಗೂಡಿಸಿ ೧೯೪೨ನೇ ಇಸ್ವಿ ಚಳವಳವನ್ನು ಸ್ಫೂರ್ತಿದಾಯಕವಾಗಿಯೂ ತೀವ್ರತೆಯಿಂದಲೂ ಸಾಗಿಸುವುದೇ ಅವರ ಧ್ಯೇಯವಾಗಿತ್ತು. ಸರ್ವತ್ರ ಭಾರತದಲ್ಲಿ ದೊಡ್ಡದೊಂದು ಕ್ರಾಂತಿಯನ್ನು ಎಬ್ಬಿಸುವ ಚಟುವಟಿಕೆಯಲ್ಲಿಯೇ ಅವರು ತೊಡಗಿದರು. ನೇಪಾಳದಲ್ಲಿ ಸೆರೆ ಸಿಕ್ಕಾಗ, ಅವರು ಚಾತುರ್ಯದಿಂದ ತಪ್ಪಿಸಿಕೊಂಡರು.

೧೯೪೨ನೇ ಚಳವಳದ ಸಂಬಂಧ, ತನ್ನ ಅಜ್ಞಾತವಾಸದಲ್ಲಿ, ಶ್ರೀ. ಜಯಪ್ರಕಾಶರು ಭಾರತದ ಸ್ವಾತಂತ್ರ್ಯ ಭಟರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಂದೇಶಗಳನ್ನೂ ಅಮೇರಿಕನ್ ಯೋಧರಿಗೆ ಎರಡು ಚಿಕ್ಕ ನಿಹಗಳನ್ನೂ ಬರೆದು ಬಹಿರಂಗಪಡಿಸಿದರು. ಇವು ಅವರ ಹೊಣೆಗಾರಿಕೆ ಮತ್ತು ಕಾರ್ಯ ಕುಶಲತೆಯ ಸೂಚಕಗಳಾಗಿವೆ.

೧೯೪೨ನೇ ಇಸವಿ ಸೆಪ್ಟಂಬರದಲ್ಲಿ, ಅವರು ಲಾಹೋರಿನಲ್ಲಿ ಪುನಃ ಸೆರೆ ಸಿಕ್ಕಿದರು. ಇದು ಅವರು ಲಾಹೋರು ರೈಲಿನಲ್ಲಿ ಪ್ರಯಾಣ ಮಾಡುವಾಗ, ಸಿ. ಐ. ಡಿ.ಗಳ ಗಳ ಏಸ್ತೂಲಿನ ಮುಂದೆ.

ಸೆರೆ ಸಿಕ್ಕಿದ ಶ್ರೀ. ಜಯಪ್ರಕಾಶರಿಗೆ ದೆಹಲಿ ಲಾಹೋರಿನ ಕತ್ತಲೆಯ ಮನೆಯಲ್ಲಿ ಚಿತ್ರ ಹಿಂಸೆಗಳನ್ನು ಕೊಡಲಾಯಿತು. ಅವರ ರಹಸ್ಯ ಕಾರ್ಯಕ್ರಮಗಳ ಸವಿಸ್ತಾರ ವಿಷಯಗಳನ್ನು ಅವರ ಬಾಯಿಂದ ಹೊರಪಡಿಸಲು, ಮಂಜುಗಡ್ಡೆಯ ಮೇಲೆ ಗಂಟೆಕಟ್ಟಿಯಾಗಿ—ನಿದ್ದೆಗೂ ಅವಕಾಶವನ್ನೀಯದೆ—ಅವರನ್ನು ಅಧಿಕಾರಿಗಳು ಕೂತು ಕೊಳ್ಳಿಸಿದರು. ಆದರೆ ಈ ಯಾವುದೊಂದೂ ಅತ್ಯಾಚಾರದಿಂದಲೂ ಶ್ರೀ. ಜಯಪ್ರಕಾಶರು ಅಧಿಕಾರಿಗಳಿಗೆ ಬಗ್ಗಲಿಲ್ಲ. ತನಗೆ ಎಧಿಸಿದ ಎಲ್ಲ ಅಮಾನುಷ ಕೃತ್ಯಗಳನ್ನೂ ಅವರು ಸಹಿಸಿದರು. ಅವರ ಮಿತ್ರ ಶ್ರೀ. ರಾಮಮನೋಹರ ಲೋಹಿಯವರೂ ಇದೇ ರೀತಿಯ ಬನ್ನವನ್ನೇ ಅಧಿಕಾರಿಗಳ ಕೈಯಿಂದ ಅನುಭವಿಸಿದ್ದರು.

ಈಚೆಗೆ, ಭಾರತ ಸಮಸ್ಯಾ ಪರಿಹಾರಕ್ಕಾಗಿ ಬ್ರಿಟಿಶ್ ಮಂತ್ರಿತ್ರಯರು ಬಂದಾಗ, ಗಾಂಧಿಜಿಯವರ ಮಹತ್ ಪ್ರಯತ್ನದಿಂದಾಗಿ, ಸಮತಾವಾದಿಗಳಾದ ಶ್ರೀ. ಜಯಪ್ರಕಾಶ, ಶ್ರೀ. ರಾಮಮನೋಹರ ಲೋಹಿಯಾ, ಆಪ್ತೆಷ್ಟ ಪಟವರ್ಧನ ಅವರೆಲ್ಲರಿಗೂ ಬಿಡುಗಡೆಯಾಯಿತು.

ಶ್ರೀ. ಜಯಪ್ರಕಾಶರಿಗೂ, ಗಾಂಧೀಜಿಯವರಿಗೂ ರಾಜಕೀಯದಲ್ಲಿ ಕೆಲ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೂ ಗಾಂಧಿಜಿಯವರು ತನ್ನ ಹೃದಯದಲ್ಲಿ ಶ್ರೀ ಜಯಪ್ರಕಾಶರಿಗೆ ಒಂದು ಸ್ಥಾನವನ್ನು ಕೊಟ್ಟಿರುತ್ತಾರೆ. ಶ್ರೀ. ಜಯಪ್ರಕಾಶ [illegible] ಕುಶಲತೆಯಲ್ಲಿ ಗಾಂಧೀಜಿಯವರಿಗೆ ಮೆಚ್ಚಿಗೆ ಇದೆ. ಶ್ರೀ. ಜಯಪ್ರಕಾಶರು ಒಬ್ಬ ವಜ್ರ ಹೃದಯಿ; ಆದರೂ ವೈಯಕ್ತಿಕ ಜೀವನದಲ್ಲಿ ಅವರು ಅತ್ಯಂತ ಸರಳ. ಎಂತಹವನ್ನೂ ತನ್ನ ಕಡೆಗೆ ಒಲಿಸುವಂಥ ಅಸಾಧ್ಯ ವರ್ಚಸ್ಸು ಅವರದು. ಇಂತಹ ಗುಣಗಳೇ ಅವರ ತತ್ವ—ಧೋರಣೆಗಳಿಗೆ ಪೋಷಕವಾಗಿವೆ

ತನ್ನ ಬಿಡುಗಡೆಯಾದ ಕೂಡಲೇ ಶ್ರೀ. ಜಯ ಪ್ರಕಾಶರು, ಗಾಂಧೀಜಿಯವರ ಸಂದರ್ಶನವನ್ನು ಮಾಡಿದರು. ಅವರ ಪತ್ನಿ ಶ್ರೀಮತಿ ಪ್ರಭಾವತಿ ದೇವಿಯವರೂ ಗಾಂಧೀಜಿಯವರ ಅತ್ಯಂತ ಪ್ರೀತಿಯ ಶಿಷ್ಯೆ ಆಗಿರುತ್ತಾರೆ.

ಭಾರತದಲ್ಲಿ ಇಂದು ಹಿಂದೀ ಸಮಸ್ಯೆಯನ್ನು ಪರಿಹರಿಸುವ ಕಾರ್ಯದಲ್ಲಿ ಪ್ರವೃತ್ತರಾದ ಬ್ರಿಟಿಷ್ ಮಂತ್ರಿತ್ರಯರಿಗೆ—"ಬ್ರಿಟಿಷರು ಭಾರತವನ್ನು ತೊರೆದ ಮೇಲೆಯೇ ಭಾರತದ ಸ್ವಾತಂತ್ರ್ಯ ನಿರ್ಣಯ" ಎಂದು ಶ್ರೀ. ಜಯಪ್ರಕಾಶರು ಸ್ಪಷ್ಟೋಕ್ತಿಯನ್ನು ಆಡಿದರು. ಕಲ್ಕತ್ತೆಯಲ್ಲಿ ನೆರೆದ ಪ್ರಚಂಡ ಸಭೆಯಲ್ಲಿ ಅವರು ಈ ರೀತಿ ಹೇಳಿದರು. "ನಾನು ಭಾರತದಲ್ಲಿ ಸಂಚರಿಸುತ್ತ, ಆಗೋಸ್ಟ್ ಚಳವಳವು ಯಾಕೆ ಯಶಸ್ವಿಯಾಗಲಿಲ್ಲವೆಂದು ಪರಿಶೋಧಿಸುವೆನು. ನನ್ನ ಯೋಜನೆಯನ್ನು ನಾನು ಈಗ ತಿಳಿಸುವುದಿಲ್ಲ. ಆದರೆ ಭಾರತದ ತರುಣರೆಲ್ಲರೂ ಎಚ್ಚತ್ತು ಸಂಘಟಿತರಾಗಿ ಸಿದ್ಧರಾಗಬೇಕು .... ಸತ್ಯಾಗ್ರಹದ ಘಟಕಗಳು ಬದಲಾಗಬೇಕು; ಸತ್ಯಾಗ್ರಹದ ರೀತಿಗಳು ಹಳೆಯವು; ಅಷ್ಟೊಂದು ಫಲದಾಯಕವಲ್ಲ. ಆದರೆ ಮಹಾತ್ಮರು ದೇಶ ಧುರೀಣರಿಂದ ಸಾಮಾನ್ಯ ಮನುಷ್ಯನವರೆಗೂ ತ್ಯಾಗವನ್ನು ಆಶಿಸಿ, ಹೊಸ ಸತ್ಯಾಗ್ರಹ ಚಳವಳಿಯನ್ನು ಪ್ರಾರಂಭಿಸಿದರೆ, ನಾನು ಪ್ರತ್ಯಕ್ಷ ಪರೀಕ್ಷೆಗಿಳಿಯದಿರಲಾರೆ".

THE BOMBAY CO-OPERATIVE INSURANCE SOCIETY LTD. BOMBAY.

ಬೋಂಬೆ ಕೊ-ಒಪರೇಟಿವ್ ಇನ್ಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್, ಬೋಂಬೆ.

ವಿಮಾಕಾರ್ಯಗಳ ವಿಶೇಷ ಯೋಜನೆಗಳು ಪ್ರತ್ಯೇಕವಾಗಿ ಗ್ರಾಮಾಂತರ ಶಾಖೆಯ ಪಾಲಿಸಿಗಳು

ನಿಮ್ಮ ಜೀವವಿಮೆಗಾಗಿ ಅಥವಾ ಪ್ರಾತಿನಿಧ್ಯಕ್ಕಾಗಿ ಯಾವಾಗಲೂ ಇವರೊಡನೆ ಆಲೋಚಿಸಿರಿ,

"ಬೋಂಬೆ ಕೊ-ಒಪರೇಟಿವ್"

ದಿ ನ್ಯೂ ಇಂಡಿಯಾ ಕೊ., ಲಿಮಿಟೆಡ್, ಚೀಫ್ ಏಜಂಟರು, 44, ಲಜ್ ಚರ್ಚ್ ರೋಡ್, ಮೈಲಾಪುರ ಮದ್ರಾಸು.

ಎಂ. ಟಿ. ಕೊರ್ಡೇಲ್, ಸುಪರಿಂಟೆಂಡೆಂಟ್ ಒಫ್ ಏಜನ್ಸೀಸ್, ಹಂಪನಕಟ್ಟಾ, ಮಂಗಳೂರು.

CANARA BANK LIMITED

(ESTD. 1906.)

(Incorporated in British India–Liability of Members Limited)

SEASON DEPOSITS.

of Rs. 10,000/— and over in multiples of Rs 1000/— and maturing within 30th September 1946 are now accepted at the following rates:—

3 months	....	2½%
4 to 5 months	....	2¼%
6 to 9 months	....	2¼%

Rates for Season Deposits of less than Rs. 10,000/– with a minimum of Rs. 1000/– and in multiples of Rs 500/-may be ascertained on application to our nearest branch.

ದಿ ಬೊಂಬೆ ಲ್ಯಾಫ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್.

1908ರಲ್ಲಿ ಸ್ಥಾಪಿಸಲ್ಪಟ್ಟದ್ದು

ಶಾಂತಿ ಮತ್ತು ಭದ್ರತೆ

ಯುರೋಪಿನ ಪೀಡಿಸಲ್ಪಟ್ಟ ಜನಾಂಗಗಳಿಗಾಗಿ ಸ್ವಾತಂತ್ರ್ಯವನ್ನು ಗಳಿಸಿ ಕೊಟ್ಟಿದ್ದ ಆ ಪ್ರಚಂಡ ಯುದ್ಧ ಮುಗಿಯಿತು. ಆ ನಾಲ್ಕು ಸ್ವಾತಂತ್ರ್ಯಗಳನ್ನು ಸಂಪಾದಿಸಿ ಕೊಡಲು ಹಲವಾರು ಯತ್ನಗಳಾದರೂ ನಾವು ಅದರ ಸಮಾಪದಲ್ಲೆಲ್ಲಿಯೂ ಇದ್ದಂತೆ ತೋರುವುದಿಲ್ಲ. ನಾವು ಎಮೆಯ ಸೇವೆಯನ್ನು ಬಯಸುವವರೆಲ್ಲರಲ್ಲಿಯೂ ಆ ಸೇವಾ ಕ್ರಮವನ್ನು ಹರಡಿಸುವ ಮೂಲಕ, ಯುದ್ಧ ಕಾಲದಲ್ಲಿಯೂ ಶಾಂತಿ ಸಮಯದಲ್ಲಿಯೂ ಈ ವೈಯಕ್ತಿಕ ವಾಸ್ತವಿಕ ಸ್ವಾತಂತ್ರ್ಯ ಸಿದ್ಧಿ ಕಾರ್ಯದಲ್ಲಿ ನಮ್ಮ ನಮ್ಮ ರೀತಿಯಲ್ಲಿ ಸಹಾಯ ಮಾಡುತ್ತಿದ್ದೇವೆ.

1945ರಲ್ಲಿ ಪೂರ್ಣವಾದ ವ್ಯವಹಾರ } ಕಂಪನಿಯದು: **2**ಕ್ಕಿ ಕೋಟಿಗೂ ಎಕ್ಕೆ ನಮ್ಮದು: ಸುಮಾರು **50**ಲಕ್ಷ

ಕೊಚ್ಚಿಕಾರ ಸಹೋದರರು ಲಿಮಿಟೆಡ್,

(1910ರಲ್ಲಿ ಸ್ಥಾಪಿಸಲ್ಪಟ್ಟದ್ದು)

ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು ಬೊಂಬಯಿ ನಗರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಿಗೆ ಸ್ಪೆಶಲ್ ಏಜೆಂಟರು.

"ಬೊಂಬಯಿ ಲ್ಯಾಫ್ ಬಿಲ್ಡಿಂಗ್ಸ್"

ಗಾಂಧಿ ನಗರ, ಉಡುಪಿ.

ಆಫೀಸುಗಳು ಇರುವ ಎಗರಗಳು:—

ಬೊಂಬಯಿ, ಬೆಂಗಳೂರು, ಕಲ್ಲಿಕೋಟೆ, ಮಧುರೈ, ಮಂಗಳೂರು, ಮದ್ರಾಸು ಮತ್ತು ತಿರುವೆಂಡ್ರಮ್.

ದಕ್ಷಿಣ ಭಾರತದಲ್ಲೆಲ್ಲ ಏಜೆನ್ಸಿಗಳಿವೆ.

THE UNITED KARNATAK INSURANCE CO., LTD.

H. O.: Dharwar. Estd: 1929.

Glad to announce the business increase in 1945 is

400% of that of in 1944.

We entertain young, energetic and ambitious persons, as agents, special agents, Organisers and Inspectors under our expansion scheme.

A. S. Kini,
Managing Director.

Please apply to:

BRANCH MANAGER,
Court Road, UDIPI.

Or M/s. M. N. BHANDARY & Co.,
Kodialbail, MANGALORE.

Machine to increase your Resources

Rs. 89 8 0 will fetch Rs. 100

Jaya Cash Certificates

For particulars apply to:—

The Bank of Mangalore Ltd.

HEAD OFFICE: CAR STREET, MANGALORE.

BRANCHES:— ○ Bunder ○ Moodabidri ○ Vittal ○ Mangalore ○ Padubidri ○ Badiadka and ○ Uppinangadi

ಶಾಸ್ತ್ರೀಯ ಅಮೂಲ್ಯ ಔಷಧಗಳ

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಪೆದ್ದುಳ್ಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 8 ಔನ್ಸಿನ ಬಾಟ್ಲಿಗೆ ರೂಪ್ಯಾ 2—4—0. ಅಂಚೆವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಆಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮುಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡಿಗೆ ೧ಕ್ಕೆ ರೂ. 4—0—0. ಅಂಚೆವೆಚ್ಚ ಬೇರೆ.

ಕಸ್ತೂರಿ ಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು – ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥೆ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು. ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2—0—0 ಪೋಸ್ಟೇಜು ವಗೈರೆ ಬೇರೆ.

ವಿ. ಸೂ. ಮೇಲಿನ ಕ್ರಯವು ಬಜಾರ ಧಾರಣೆಗೆ ಅನುಸರಿಸಿ ಇರುತ್ತದೆ.

ಶ್ರೀ। ಪಿ. ಮಹಾಬಲ ಹೆಬ್ಬಾರ್,
ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯದೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

THE Pie-Money Bank, Ltd.,

Maidan Road, MANGALORE.

Undertakes all kinds of Banking Business. Current account at 1% per annum. Savings Bank Deposits at 4% per annum.

FIXED DEPOSITS.

For 2 years 4½% 1 year 4%
For 6 months 3½% 3 months 3%

Auction Chit Funds ranging from Rs. 100—5000 run regularly on systematic lines.

Unique Banking facilities to Businessmen and interested Public.

Apply for particulars:—

K. R. Guru,
Managing Director.

ವೆಂಕಟಗಿರಿಮಹಾತ್ಮೆ

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖಚಿತ ವಾಗುವಂತೆ ಗೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ. ೯೯ ಪಟ್ಟಗಳಿರುವ ೧೫ ಅಧ್ಯಾಯಗಳು ದಪ್ಪವಾದ ಕಾಗದ. ಮುದ್ದಾದ ಮುದ್ರಣ.

ಬೆಲೆ ರೂಪ್ಯಾ ೧-೮-೦ ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಖಾತ್ರಿ ಬಣ್ಣದ ಆಧುನಿಕ ನಮೂನೆಯ
ಶ್ರೇಷ್ಠ ತರಗತಿಯ

80 ಮತ್ತು 100 "ಕೌಂಟ್" ನೀರಗಳು

ಮತ್ತು

ಕೈ ಮಗ್ಗದ ಮೈಟಿ ವ್ಯಾಲುಗಳು

ಪಡಕೊಳ್ಳುವ ಮುಂಚೆ JNC ಗುರುತನ್ನು ನೋಡಲು ಮರೆಯದಿರಿ.

ಜೆ. ನಾರಾಯಣ ಸಾಮಿ ಚೆಟ್ಟಿ ಎಂಡ್ ಕೊ.,
ರಖಂ ವ್ಯಾಪಾರ 18/498 ರಂಗಯ್ಯ ಗೌಡರ ರಸ್ತೆ
ಕೊಯಮುತ್ತೂರು.

JAYA LAXMI BANK, LTD.,

HEAD OFFICE:

MANGALORE.

(ESTD. 1923.)

Our steady progress for the last 22 years inspires confidence both in the depositing and the borrowing public.

Curteous and Prompt Service.

For all further information kindly call on:

M. Narain Shanker,
MANAGER,
Head Office.

...ANGA... LTD.

MANGALORE. Branch:—MOODABIDRI

...ಂಗಳೂರು, ಲಿಮಿಟೆಡ್, ಮಂಗಳೂರು.

Authorised ಧಿಕೃತ ಮೂಲಧನ } Rs 200,000.

Subscribed Capital ಚಂದಾ ಅರ್ಪಿಸಿದ್ದು } Rs. 27,250.

Paid-up Capital ಕೆತ್ತು ಬಂದದ್ದು } Rs. 5,705.

ST...

...apital paid-up ಪಾಲು ಮ್ಯೂಲಿಕರಿಂದ ವಸೂಲಾದ ಧನ

...ITEMENT OF AFFAIRS AS ON 31ST DECEMBER 1934.

Deposits, Fixed, Current, Savings Bank, Recurring, Savings Bank etc. ಚಾಲ್ತಿ, ಸೇವಿಂಗ್ಸ್ ಬೇಂಕ್ ರಿಕರಿಂಗ್ ಡೇವಿಂಗ್ಸ್, ನಿರಖು ಠೇವಣಾತಿ ವಗೈರೆ	Rs.	5,705—0—0	Furniture and Safe ಟ್ರೆಜರಿ ವಗೈರೆ	రూ. 1,100—0—0
Due to Bankers ಬೇಂಕರರಿಗೆ ಸಲ್ಲತಕ್ಕದ್ದು . .	రూ.	69,767—4—3	Authorised Investments ಚಿನ್ನಾಭರಣ, ವ ಇತರ ಜವಾಬ್ದಾರಿಯ ಮೇಲೆ .	రూ. 91,203—6—0
Sundries ನಾನಿಲವಾರು	రూ.	16 881—10—4	Sundries ನಾನಿಲವಾರು	రూ. 19,511—10—0
	రూ.	20 992—0—7	Cash in hand and with Bankers at call ಕೈಯಲ್ಲಿ ಇರತಕ್ಕ ವ, ಬೇಂಕರರಲ್ಲಿರತಕ್ಕ ನಗದಿ ಶಿಲ್ಕು .	రూ. 1,530—14—2
	రూ.	113,345—15—2		రూ. 113,345—15—2

Fixed Deposits ನಿರಖು ಠೇವಣಾತಿ.

For 2 years 6½% ಎರಡು ವರ್ಷ ವ್ಯಾದೆಯವುಗಳಿಗೆ. For 6 months 5% ಆರು ತಿಂಗಳ ವ್ಯಾದೆಯವುಗಳಿಗೆ.

For 1 year 6% ಒಂದು ವರ್ಷ " For 3 months 4½% ಮೂರು ತಿಂಗಳ "

Current, Sayings Bank, Cumulative Deposits are accepted at most favourable rates. ಚಾಲ್ತಿ ಸೇವಿಂಗ್ಸ್ ಬ್ಯಾಂಕ್, ಕ್ಯುಮುಲೇಟಿವ್ ಎಂಬ ಸಂಚಯದ ಠೇವಣಾತಿಗಳು ಸ್ವೀಕರಿಸಲ್ಪಡುವುವು

Drafts on Madras, Bombay, Calicut and Bangalore issued. Bills for collections received. ಮದ್ರಾಸು, ಮುಂಬಯಿ, ಕಲ್ಲಿಕೋಟೆ, ಮತ್ತು ಬೆಂಗಳೂರು, ಚೆಕ್ಕುಗಳು ಕೊಡಲಾಗುವುವು

ಚೆಕ್ಸ್ ಮತ್ತು ಬಿಲ್ಸ್ ಬಸೂಲಿ ಎಕ್ಸ್‌ಚೇಂಜ್ ಹಿಂದೂಸ್ಥಾನದ ...ಪ್ಪತಿ ಶಿಲ್ಕಿನ ಮೇಲೆ 4—6—0% ಬಡ್ಡಿ ಕೊಡಲ್ಪಡುವುದು.

at 4—6—0% ಸೇವಿಂಗ್ಸ್ ಬ್ಯಾಂಕ್ ಡಿಪೊಜಿಟಿನ ಮೇಲೆ Savings Bank Deposits-Interest allowed on daily balances

ALL KINDS OF BANKING BUSINESS UNDERTAKEN.

ಸಾಮಾನ್ಯ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವುವು.

DRAFTS PAYABLE AT PAR.

ಮೂಲಬೆಲೆಗೇ ಕೆಲವು ಪಾಲುಗಳೂ ಮಾರಾಟಕ್ಕಿವೆ.

APPLY FOR PARTICULARS.

ವಿಶೇಷ ವಮಾಹಿತಿ ಬಗ್ಗೆ ಆಫೀಸಿಗೆ ಬರಕೊಳ್ಳುವುದು.

...ನಿಂದ ೬ ದಿನವೇ ...ಕೊಂಡುಕೊಳ್ಳಿ.

ನೀವು ಚಿತ್ರಗಳನ್ನು ತೆಗೆಯಬಹುದು.

ಇದರಂತೆ

...ಳು ಈಗ ತಾನೇ ತಯಾರಾಗಿರುವ

ಅಗ್ಗವಾದ ಕೆಮರಾ.

...ದರೊಡನೆ, ಅಗತ್ಯವಿರುವ ಎಲ್ಲ ಉಪಕರಣಗಳು, ...ಸಾಯನಿಕ ಸಾಮುಗ್ರಿಗಳು, ಮತ್ತೂ ಉಪಯೋಗಿ ...ವ ಕ್ರಮಗಳು ಇದನ್ನು ಒದಗಿಸಲಾಗುತ್ತದೆ.

ಬೆಲೆ ರೂ. 2—15—0 ಮಾತ್ರ. ಪೋಸ್ಟೇಜ್ ಪ್ರತ್ಯೇಕ.

ಕೃಷ್ಣಾ ಏಜನ್ಸಿ, ಪೋ. ಬಾ. 119, ಮದ್ರಾಸ್.

...ಸಂಪೂರ್ಣವಾದ

ಕೆಮರಾ ಪೆಟ್ಟಿಗೆ.

— ಮೊಡೆಲ್ 1935 —

ಉತ್ಕೃಷ್ಟ ತರಗತಿಯ "ಲೆನ್ಸಿನಿಂದಲೂ" ವಸ್ತುಗಳ ತೇಜಸ್ಸನ್ನು ಸ್ಪಷ್ಟವಾಗಿ ಆಕರ್ಷಿಸುವಂತಹ ಕೇಂದ್ರವುಳ್ಳ ಛಂದು ನವೀನವಾದ ದೃಶ್ಯಾನ್ವೇಷಣದ ಯಂತ್ರದಿಂದಲೂ ಇದು ಸುಸಜ್ಜಿತವಾಗಿದೆ.



ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಹಿಂದೂಸ್ಥಾನದಲ್ಲಿ 1874ರಲ್ಲು ಸ್ಥಾಪಿತವಾದದ್ದು.)

ವಜ್ರೋತ್ಸವದ ವರ್ಷ-1934.

1933ರ ಫಲಿತಾಂಶಗಳು.

ಹೊಸ ವಿಮೆ . . .	రూ.	7,04,26,203
ಚಾಲ್ತಿಯಲ್ಲಿರುವ ಒಟ್ಟು ವಿಮೆ .	,,	47,93,31,074
ಒಟ್ಟು ತೆತ್ತ ವಿಮೆ. . .	,,	15,27,38,860
ವಾರ್ಷಿಕ ಆಯ . . .	,,	3,43,21,522
ಫಂಡುಗಳು . . .	,,	14,30,04,536

ನೀವು ಪ್ರಥಮತ ಜೀವವಿಮೆ ಮಾಡಲು ಅಥವಾ ಹೆಚ್ಚಿನ ಪೊಲಿಸಿ ತೆಗೆದುಕೊಳ್ಳಲು ಇನ್ಯೂರು ಕಂಪೆನಿಯನ್ನು ಆರಿಸುವ ಅನೇಕ ವರ್ಷಗಳ ಹಿಂದೆ ಸ್ಥಾಪಿತವಾದ ಹಾಗೂ ವೃದ್ಧಿಪ್ರವಾದ ಈ ಕಂಪೆನಿಗೆ ಬಂದರೆ ನಿಮಗೆ ಪ್ರಯೋಜನವಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಯಿರಿ:—

ದಿ ಬ್ರಾಂಚ್ ಸೆಕ್ರೆಟರಿ,

ಓರಿಯಂಟಲ್ ಬಿಲ್ಡಿಂಗ್ಸ್,

ಸೌತ್ ಪೆರೇಡ್, ಬೆಂಗಳೂರು.

ಅಥವಾ ಈ ಕೆಳಗೆ ಕಾಣಿಸಿದ ಕಂಪೆನಿಯ ಯಾವ ಆಫೀಸಿಗೂ ಬರೆಯಬಹುದು:—

ಆಗ್ರ	ಕಲ್ಕತ್ತಾ	ಲಕ್ನೊ	ರಾಜಶಾಯಿ
ಅಜ್ಮೀರ್	ಕೊಲೊಂಬೊ	ಮಧ್ರಾಸ್	ರಾಂಚಿ
ಅಹಮ್ಮದಾಬಾದ್	ಡಾಕ್ಕಾ	ಮಾಂಡಾಲೆ	ರಂಗೂನು
ಅಲ್ಲಹಾಬಾದ್	ಡೆಲ್ಲಿ	ಮರ್ಕರಾ(ಮಡಿಕೇರಿ)	ರಾವಲ್ಪಿಂಡಿ
ಅಂಬಾಲ	ಗೌಹತಿ	ಮೊಂಬಾಸ	ಸಿಂಗಾಪುರ
ಬರೇಲಿ	ಜಾಲ್ಗೊನ್	ನಾಗಪುರ	ಸುಕ್ಕೂರು
ಬಿಜವಾಡ	ಕರಾಚಿ	ಪಾಟ್ನ	ತಿರಿಚಿನಾಪಳ್ಳಿ
ಭೂಪಾಲ್	ಕೌಲಲುಂಪರ್	ಪೂನಾ	ತ್ರಿವೆಂದ್ರಮ್
	ಲಾಹೋರ್	ರಾಯಿಪುರ	ವಿಶಾಖಪಟ್ಟಾಮ್

ಡಿ. ವಾಸ್ ಎಂಡ್ ಸನ್ಸ್, ಏಜಂಟ್ಸ್,

ಮಂಗಳೂರು, ದ. ಕ.

...ಣಾ, ಕೊಳಲು, ಹಾರ್ಮೋನಿಯಮ್ ಮತ್ತು ...ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ

ಹಾರ್ಮೋನಿಯಂ ಶಿಕ್ಷಕ

...ಡ್ಡಿ, ಯಾವತ್ತೂ ಕನ್ನಡ ನಾಟಕದೊಳಗಿನ ಪದಗಳೂ ಮತ್ತು ಮರಾಠಿ ...ಟಕದೊಳಗಿನ ಪದಗಳು, ಹಿಂದೂಸ್ಥಾನೀ ತೇಜುಗಳ ಗ್ರಾಮೋಫೋನ್ ...ಲ್ಲಿ ಕೊಟ್ಟ ಪದಗಳ ಸಕಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ.

...ನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಬೆಲೆ ... ಆಣೆ

ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡ

B. V. PHATAK,

Fort, MIRAJ (S.M.C.)

PRINTING

For Economy, Fastness & Brilliance

Use KAST & EHINGER

(GERMANY)

Well-khown highly concentrated Printing Inks of all Colours.

Sole Agents for SOUTHERN INDIA AND CEYLON:—

The Anglo-German Trading Co.,

CALICUT.

ಕಸ್ತೂರಿ.

28 ರೂಪಾಯಿ—ತೊಲೆಯೊಂದಕ್ಕೆ.

ಬೆರಕೆ ಎನೂ ಇಲ್ಲದ ಅತಿ ಶುದ್ಧನಾದ ಕಸ್ತೂರಿ. ಔಷಧಗಳ ಸಿದ್ಧತೆಯಲ್ಲಿ ಬಹಳ ಪ್ರಯೋಜನಕ್ಕೆ ಬೀಳುವಂಥಾದ್ದು. ಇದರ ಪರಿಶುದ್ಧತೆಯ ವಿಚಾರದಲ್ಲಿ ನನ್ನ ಗ್ಯಾರಂಟಿ ಇದೆ.

ಕಸ್ತೂರಿ ಡಿಪೋ,

ದ್ವಾರಕದಾಸ್ ಮ್ಯಾನ್‌ಶನ್ಸ್—ಬೊಂಬಾಯಿ 4.